# ರಾಜಾ ಭರ್ತೃಹರಿ

( ಜೀವನ ಚರಿತ್ರೆ )

"ಶಕವಧೂ ವೈಧವ್ಯ ದೀಕ್ಷಾಗುರು"

—ಶಕರ ಪತ್ನಿಯರಿಗೆ ವೈಧವ್ಯದ ದೀಕ್ಷೆಯನ್ನು ಕೊಡುವಂತಹ ಗುರು.

—ಕೃತವೀರ ವಿಕ್ರಮ

# ಹಿನ್ನೆಲೆ

ಭರ್ತೃಹರಿಯ ಜೀವನ ಚರಿತ್ರೆಯನ್ನು ಬರೆಯುವ ಮೊದಲು ಆ ಸಮಯದಲ್ಲಿ ಭಾರತದ ಪರಿಸ್ಥಿತಿ ಹೇಗಿದ್ದಿತು ಎಂಬುದನ್ನು ವಿಚಾರ ಮಾಡುವದೊಳಿತು. ಏಕೆಂದರೆ ಇಂದು ಬಹಳಷ್ಟು ಜನ ಗ್ರಂಥಕಾರರು ಭರ್ತೃಹರಿಯ ಜೀವನ ಚರಿತ್ರೆಯನ್ನು—ನಾಟಕಗಳನ್ನು ಕೂಡ—ಬರೆದಿದ್ದು ಅವರೆಲ್ಲ ಒಂದಿಲ್ಲೊಂದು ರೀತಿಯಿಂದ ತಿಳಿದೊ, ತಿಳಿಯದೆಯೋ ಭರ್ತೃಹರಿಗೆ ಅಪಚಾರವನ್ನು ಮಾಡುತ್ತಲೇ ಬಂದಿದ್ದಾರೆ. ಅವನ ಕಿರಿಯ ರಾಣಿ ಪಿಂಗಳೆಯನಂತೂ ವೇಶ್ಯೆಗಿಂತ ಕೀಳಾಗಿ ಚಿತ್ರಿಸಿದ್ದಾರೆ.

ನಾಟಕ ಕಾರನೇ ಆಗಲಿ, ಚರಿತ್ರೆ ಕಾರನೇ ಆಗಲಿ ಯಾವುನೊಬ್ಬ ಪ್ರಾಚೀನ ಪುರುಷನ ಬಗ್ಗೆ ಇಲ್ಲವೆ ಮಹಿಳೆಯ ಬಗ್ಗೆ ಬರೆಯುವಾಗ ಅವರ ಅಂದರೆ ತಾವು ಬರೆಯಲಿರುವವರ ಕಾಲವು ಯಾವುದು? ಆಗಿನ ಪರಿಸ್ಥಿತಿಯು ಹೇಗಿದ್ದಿತು ? ಎಂಬುದನ್ನೆಲ್ಲ ಆಳವಾಗಿ ಅಭ್ಯಾಸ ಮಾಡಬೇಕಾಗುತ್ತದೆ. ಆದರೆ ಇಂದು ನಮ್ಮಲ್ಲಿ ಆ ಬಗೆಯ ರಚನೆಗಳು ಬಹು ಕಡಿಮೆ ಎನ್ನಬೇಕು. ಒಂದು ದೃಷ್ಟಿಯಿಂದ ಇಲ್ಲವೇ ಇಲ್ಲವೆಂದರೂ ನಡೆದೀತು. ಯಾರಾದರೊಬ್ಬರು ಯಾವುದೊಂದರ ಆಧಾರದಿಂದಲೋ, ಕಲ್ಪನೆಯಿಂದಲೋ ಒಂದು ಕತೆಯನ್ನೊ, ನಾಟಕವನ್ನೋ ರಚಿಸಿಬಿಟ್ಟರಾಯಿತು. ಅದೇ ಆಧಾರದ ಮೇಲೆ ಉಳಿದವರೂ ರಚಿಸಿಬಿಡುತ್ತಾರೆ. ಅವನು ಬರೆದಿರುವದು ಎಷ್ಟರ ಮಟ್ಟಿಗೆ ನಿಜವಿದೆ, ಎಂಬುದನ್ನು ಪರಿಶೀಲಿಸುವ ಗೋಜಿಗೇ ಅವರು ಹೋಗುವದಿಲ್ಲ.

ಪ್ರಸ್ತುತ ಭರ್ತೃಹರಿಯ ಬಗೆಗೂ ಇದೇ ಬಗೆಯ ಅಪಚಾರವಾಗಿರುವದು. ಉತ್ತರ ಭಾರತದ ಯಾರೋ ಒಬ್ಬರು ಭರ್ತೃಹರಿಯ ಅವನದೇ ಆದ ನೀತಿ ಶತಕದ ಎರಡನೆಯ ಶ್ಲೋಕದ ಆಧಾರದಿಂದ ಅವನ ಚರಿತ್ರೆಯನ್ನು ಬರೆದಿರುವರು. ಅದನ್ನೇ ಆಧಾರವಾಗಿರಿಸಿಕೊಂಡು ಬಹು ಜನರು

ಆ ಬಗ್ಗೆ ಬರೆದಿದ್ದಾರೆ. ಭರ್ತೃಹರಿಯ ಆ ಶ್ಲೋಕವು ಈ ರೀತಿಯಾಗಿರುವದು.

ಯಾಂ ಚಿಂತಯಾಮಿ ಸತತಂ ಮಯಿ ಸಾ ವಿರಕ್ತಾ
ಸಾಪ್ಯನ್ಯಮಿಚ್ಛತಿ ಜನಂ ಸ ಜನೋಽನ್ಯ ಸಕ್ತಃ ।
ಅಸ್ಮತ್ಕೃತೇ ಚ ಪರಿತುಷ್ಯತಿ ಕಾಚಿದನ್ಯಾ
ಧಿಕ್ ತಾಂ ಚತಂ ಚ ಮದನಂಚ ಇಮಾಂಚ ಮಾಂಚ ॥

"ನಾನು ನಿರಂತರವೂ ಯಾವ ಪ್ರಿಯತಮೆಯ ಚಿಂತನೆಯಲ್ಲಿ ಮಗ್ನನಾಗಿರುವನೋ, ಆವಳು ನನ್ನಿಂದ ವಿರಕ್ತಳಾಗಿದ್ದು ಬೇರೊಬ್ಬ ಪುರುಷನನ್ನು ಇಚ್ಛಿಸುತ್ತಾಳೆ. ಆ ಅನ್ಯ ಪುರುಷನು ಕೂಡ—ಅವಳನ್ನು ಬಿಟ್ಟು-ಬೇರೊಬ್ಬ ವನಿತೆಯಲ್ಲಿ ಆಸಕ್ತನಾಗಿದ್ದು, ಅವಳು—ಆ ಬೇರೊಬ್ಬಳು—ನನಗಾಗಿ ಪ್ರಾಣ ಕೊಡಲು ಸಿದ್ಧಳಾಗಿರುವಳು..........."

ಈ ಶ್ಲೋಕದ ಆಧಾರದ ಮೇಲೆಯೆ ಬಹಳಷ್ಟು ಜನರು ಭರ್ತೃಹಯರಿ ಕಥೆಯನ್ನು ರಚಿಸಿದ್ದಾರೆ. ಅಂದರೆ—

ಭರ್ತೃಹರಿಯ ಕಿರಿಯರಾಣಿ ಪಿಂಗಳೆಯು ಓರ್ವ ಕುದುರೆ ಸವಾರನನ್ನು ಪ್ರೀತಿಸುತ್ತಿದ್ದಳು. ಆ ಸವಾರನು ಓರ್ವ ವೇಶ್ಯೆಯಲ್ಲಿ ಅನುರಕ್ತನಾಗಿದ್ದ. ವೇಶ್ಯೆಯು ಅರಸನಾದ ಭರ್ತೃಹರಿಗಾಗಿ ಪ್ರಾಣವನ್ನೂ ಕೊಡಲೂ ಸಿದ್ಧಳಿದ್ದಳು. ಓರ್ವ ಸಿದ್ಧ ಪುರುಷನು ಭರ್ತೃಹರಿಗೆ ಒಂದು ಅಮರ ಫಲವನ್ನು ಕೊಡುತ್ತಾನೆ. ಅವನದನ್ನು ತನ್ನ ಪ್ರೀತಿಯ ಮಡದಿ ಪಿಂಗಳೆಗೆ ಕೊಡುತ್ತಾನೆ. ಪಿಂಗಳೆಯು ತನ್ನವನಾದ ಕುದುರೆ ಸವಾರನಿಗೆ ಕೊಡುತ್ತಾಳೆ. ಆ ಕುದುರೆ ಸವಾರನು ತನ್ನ ಪ್ರೇಯಸಿಯಾದ ವೇಶ್ಯೆಗೆ ಕೊಡುತ್ತಾನೆ. ವೇಶ್ಯೆಯು "ಇಂಥ ಅಮರ ಫಲವು ನನ್ನಂಥವಳಿಗೆ ಯೋಗ್ಯವಲ್ಲ. ಇದು ಅರಸನಾದ ಭರ್ತೃಹರಿಗೆ ಸಲ್ಲತಕ್ಕದ್ದು" ಎಂದು ಯೋಚಿಸಿ ಭರ್ತೃಹರಿಗೆ ಕೊಡುತ್ತಾಳೆ.

ಈ ರೀತಿಯಾಗಿ ಭರ್ತೃಹರಿಯು ಪಿಂಗಳೆಗೆ ಕೊಟ್ಟ ಅಮರ ಫಲವು ಅಷ್ಟೊಂದು ಪ್ರವಾಸ ಮಾಡಿ ಅರ್ಥಾತ್ ಕೈಯಿಂದ ಕೈಗೆ ಒದಲಾಗುತ್ತ ಮತ್ತೆ ಅವನಿಗೇ—ಭರ್ತೃಹರಿಗೇ—ಬಂದು ಸೇರುತ್ತದೆ. ಆಗ ಅವನಿಗೆ ಆಶ್ಚರ್ಯವಾಗಿ ಆ ಬಗ್ಗೆ ವಿಚಾರಣೆ ನಡೆಸುತ್ತಾನೆ. ತತ್ಪರಿಣಾಮವಾಗಿ ತನ್ನ ಪ್ರೇಮದ ಪತ್ನಿ ಪಿಂಗಳೆಯು ವ್ಯಭಿಚಾರಿಣಿಯೆಂಬುದು ಸಿದ್ಧವಾಗುವದು. ಆಗ ಅವನಿಗೆ ಜೀವನದಲ್ಲಿಯೇ ಜಿಗುಪ್ಸೆಹೊಂದಿ ವೈರಾಗ್ಯವನ್ನು ತಾಳಿ ಗೋರಕ್ಷ ಪಂಥವನ್ನು ಸೇರುವನು. ಇದು ಇಂದು ಎಲ್ಲೆಲ್ಲಿಯೂ ಕಂಡುಬರುತ್ತಿರುವ ಭರ್ತೃಹರಿಯ ಕಥೆಯಾಗಿದೆ.

ಅವನ—ಭರ್ತೃಹರಿಯ—ಒಂದು ಶ್ಲೋಕದ ಆಧಾರದ ಮೇಲೆ ಆವನ ಕಥೆಯನ್ನು ರಚಿಸಲು ಪ್ರಯತ್ನಿಸುವವರು ಅವನ ಇನ್ನುಳಿದ ಶ್ಲೋಕಗಳತ್ತ ಗಮನ ವೀಯದಿರುವದು ನನಗೆ ಆಶ್ಚರ್ಯವನ್ನುಂಟು ಮಾಡುತ್ತಿದೆ. ಅದೇ ಭರ್ತೃಹರಿಯು ಶೃಂಗಾರ ಶತಕದ ಹದಿನೈದನೆಯ ಶ್ಲೋಕದಲ್ಲಿ;

ತಸ್ಯಾಃಸ್ತನೌ ಯದಿ ಘನೌ ಜಘನಂ ವಿಹಾರಿ
  ವಕ್ತ್ರಂ ಚ ಚಾರು ತವ ಚಿತ್ತ ಕಿಮಾಕುಲತ್ವಂ ।
ಪುಣ್ಯಂ ಕುರುಷ್ವ ಯದಿ ತೇಷು ತವಾಸ್ತಿ ವಾಂಛಾ
  ಪುಣ್ಯೈರ್ವಿನಾ ನ ಹಿ ಭವಂತಿ ಸಮೀಹಿತಾರ್ಥಾಃ ॥

“ಓ, ಚಿತ್ತವೆ! ಆ ತರುಣ ಸ್ತ್ರೀಯ ಮಾಂಸ ಭರಿತ ಪುಷ್ಟಸ್ತನಗಳು, ಘಮನೋಹರವಾದ ತೊಡೆಗಳು ಹಾಗು ಅವಳ ಸುಂದರವಾದ ಮುಖವನ್ನು ನೋಡಿ ಏತಕ್ಕೆ ವ್ಯಾಕುಲಗೊಳ್ಳುವೆ? ಒಂದು ವೇಳೆ ನೀನು ಅವಳ ಕಠೋರ ಸ್ತನಗಳಿಂದ ಆನಂದ ಪಡೆಯಬೇಕೆಂದಿದ್ದರೆ ಮೊದಲು ಪುಣ್ಯವನ್ನು ಮಾಡು ಏಕೆಂದರೆ ಪುಣ್ಯವನ್ನು ಮಾಡದೆ ಮನೋರಥವು ಪೂರ್ಣವಾಗುವದಿಲ್ಲ. ಅಂದರೆ ತಾರುಣ್ಯದ ಹೊಸ್ತಿಲಲ್ಲಿ ಕಾಲಿರಿಸುತ್ತಿರುವ ಹರಿಣಾಕ್ಷಿಯರಾದ ಸುಂದರಿಯರೊಂದಿಗೆ ಸ್ವರ್ಗಸುಖವನ್ನು ಅನುಭವಿಸಬೇಕಾದರೆ ಮೊದಲು ಸಾಕಷ್ಟು ಪುಣ್ಯವನ್ನು ಮಾಡಿರಬೇಕು. ಏಕೆಂದರೆ ಅಂಥವರು ಎಲ್ಲರಿಗೂ ಲಭ್ಯವಾಗುವದಿಲ್ಲ. ಅರ್ಥಾತ್ ಅಂಥವರು ಸುಲಭ ಸಾಧ್ಯರಲ್ಲ.

—ಎಂದು ಹೇಳಿರುವನು. ಈ ಬಗೆಯ ಇನ್ನೂ ಎಷ್ಟೋ ಶ್ಲೋಕಗಳು ಅವನ ಶತಕಗಳಲ್ಲಿ ಕಂಡು ಬರುವವು. (ಉಳಿದ ಶ್ಲೋಕಗಳೂ ಇದೇ ಗ್ರಂಥ ದಲ್ಲಿವೆ. ನೋಡಿಕೊಳ್ಳಬಹುದು.) ಇವುಗಳಿಂದ ಒಂದು ಮಾತು ಸಿದ್ಧವಾಗ ಬಹುದು. ಅಂದರೆ ತನ್ನ ಹೆಂಡತಿಯು ಇನ್ನೊಬ್ಬನೊಂದಿಗೆ ಅನೈತಿಕ ಸಂಪ ರ್ಕವನ್ನಿರಿಸಿಕೊಂಡುದು ಕಂಡು ಬಂದಾಗ, ಹೇಸಿಕೊಂಡು ವೈರಾಗ್ಯ ಭಾವ ನೆಯನ್ನು ತಾಳುವಷ್ಟು ಭರ್ತೃಹರಿಯು ಹೀನ ಮನೋವೃತ್ತಿಯವನಾಗಿರ ಲಿಲ್ಲ.

ಪಿಂಗಳೆಯು ಅಪೂರ್ವ ಸುಂದರಿ. ಜೊತೆಗೆ ರಾಜಕನ್ಯೆ. ಅಲ್ಲದೆ ಭರ್ತೃ ಹರಿಯ ನಚ್ಚಿನ ರಾಣಿ. ಅಂಥವಳು ಓರ್ವ ಕುದುರೆಯ ಸವಾರನೊಂದಿಗೆ ಸಂಬಂಧವನ್ನಿರಿಸಿಕೊಂಡಿರುವದು ತಿಳಿದು ಬಂದಾಗ ಅವನು–ಭರ್ತೃಹರಿಯು —ಎಲ್ಲವನ್ನೂ ತೊರೆದು ಸನ್ಯಾಸಿಯಾಗಿದ್ದಾನೆ; ಎಂದು ಈ ವರೆಗೆ ಭರ್ತೃಹರಿಯ ಕಥೆಯನ್ನು—ನಾಟಕಗಳನ್ನು—ಬರೆದವರ ಅಭಿಪ್ರಾಯ ವಾಗಿದೆ.

ಆದರೆ ಭರ್ತೃಹರಿಯು ಈಗಿನ ಅವನ ಚರಿತ್ರೆಯನ್ನು—ಬರೆದಂಥ ಮಹನೀಯರು ತಿಳಿದು ಕೊಂಡಷ್ಟು ಮೂರ್ಖನಾಗಿರಲಿಲ್ಲ. ಅವನು ಮಹಾ ಮೇಧಾವಿ, ಶೃಂಗಾರ ಹಾಗು ನೀತಿ ಶತಕಗಳಂತಹ ಆಣಿ ಮುತ್ತುಗಳನ್ನು ರಚಿಸಿದ ಘನ ವಿದ್ವಾಂಸ. ಹೆಣ್ಣು ಏನೆಂಬುದನ್ನು ಅರಿತುಕೊಂಡ ಕಾಮಶಾಸ್ತ್ರ ಪ್ರವೀಣ- ಇಂಥವನು ಹಾಗಾಗುತ್ತಾನೆಂದರೆ ಯಾರಾದರೂ ನಕ್ಕಾರು

ಅಲ್ಲದೆ ಪಿಂಗಳೆಯು ಕೂಡ ಇಂದಿನ ಚರಿತ್ರೆಕಾರರು—ನಾಟಕಕಾರರು ನಿರ್ಮಿಸಿದಂತಹ ಬಾಜಾರ ಬಸವಿಯಲ್ಲ. ಅವಳೂ ಓರ್ವ ರಾಜಕನ್ಯೆ. ಮಹಾಮೇಧಾವಿ, ಘನ ವಿದ್ವಾಂಸ ಹಾಗು ಚಕ್ರವರ್ತಿಯ ಸೋದರ ಭರ್ತೃ ಹರಿಯ ಪತ್ನಿ. ಅಂಥವಳು ಓರ್ವ ಕುದುರೇ ಸವಾರನನ್ನು ಪ್ರೀತಿಸುತ್ತಾ ಳೆಂದರೆ ಹೆಣ್ಣು ಜಾತಿಗೇ ಅವಮಾನ, ಕೆಲ ನಾಟಕಕಾರರಂತೂ ಪಿಂಗಳೆ ಯನ್ನು ಬೀದಿಯ ಸೂಳೆಗಿಂತಲೂ ಕಡೆಯಾಗಿ ಚಿತ್ರಿಸಿದ್ದಾರೆ. ಅವುಗಳನ್ನೆಲ್ಲ

ಪರಿಶೀಲಿಸಿದಾಗ ಇವರೆಲ್ಲ ಭರ್ತೃಹರಿ ಹಾಗು ಪಿಂಗಳೆಯರ ಕಾಲವನ್ನು, ಆಗಿನ ವಾತಾವರಣವನ್ನು ಚೆನ್ನಾಗಿ ಅಭ್ಯಾಸ ಮಾಡಿಲ್ಲವೆಂಬುದು ವ್ಯಕ್ತವಾಗುವದು. ಒಂದು ವೇಳೆ ಅವರು ಆಗಿನ ಪರಿಸ್ಥಿತಿಯನ್ನು ಚೆನ್ನಾಗಿ ಅಭ್ಯಸಿಸಿದ್ದರೆ ನಿಜಕ್ಕೂ ಈ ಬಗೆಯ ದ್ರೋಹ ಅವರಿಂದ–ಚರಿತ್ರಕಾರರು ಹಾಗು ನಾಟಕಕಾರರಿಂದ—ಖಂಡಿತವಾಗಿಯೂ ಆಗುತ್ತಿರಲಿಲ್ಲ. ಅಂತೆಯೇ ಆಗಿನ ಪರಿಸ್ಥಿತಿಯನ್ನು ವಿವರಿಸುವದು ಇಲ್ಲಿ ಅವಶ್ಯಕವಾಗಿದೆ.

§ § §

# ಆಗಿನ ಪರಿಸ್ಥಿತಿ

ಮಾಳವದ ಕೃತವೀರ ವಿಕ್ರಮಾದಿತ್ಯನು ಕ್ರಿಸ್ತ ಶಕಕ್ಕೆ ಪೂರ್ವದಲ್ಲಿಯೇ ಇದ್ದನು. ಅರ್ಥಾತ್ ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಮಾಳವ ರಾಜ್ಯವನ್ನಾಳುತ್ತಿದ್ದನು. ನ್ಯಾಯಶೀಲನೂ, ಮಹಾದಾನಿಯೂ ಆದ ಅವನ ಶಕವು ಕ್ರಿ. ಶ. ಪೂರ್ವ ೫೭ (B- C.)ರಿಂದ ಪ್ರಾರಂಭವಾಗಿದೆ.

ಕೆಲ ಸಂಶೋಧಕರು ವಿಕ್ರಮಾದಿತ್ಯನ ಅಸ್ತಿತ್ವದ ಬಗೆಗೇ ಸಂಶಯವನ್ನು ತಾಳಸಿದ್ದಾರೆ. ಏಕೆಂದರೆ ಕೆಲ ಪುರಾಣಗಳಲ್ಲಿ ಅವನ—ವಿಕ್ರಮಾದಿತ್ಯನ—ಬಗೆಗೆ—ಉಲ್ಲೇಖವಿಲ್ಲದಿರುವದೇ ಆ ಸಂಶಯಕ್ಕೆ ಕಾರಣವಾಗಿರುವದು. ಆದರೂ ಬೇರೆ ರೀತಿಯಿಂದ ವಿಕ್ರಮಾದಿತ್ಯನ ಅಸ್ತಿತ್ವವನ್ನು ಎತ್ತಿತೋರಿಸುವ ನೂರೆಂಟು ಆಧಾರಗಳು ಸಿಕ್ಕುತ್ತವೆ.

ಮೊದಲನೆಯ ಶತಮಾನದಲ್ಲಿದ್ದ ಶಾತವಾಹನ ಸಮ್ರಾಟನಾದ 'ಹಾಲ'ನು ವಿಕ್ರಮಾದಿತ್ಯನ ಪರಮಪೂಜ್ಯ ಮಾನಪೂರ್ಣ ವರ್ಣನೆಯನ್ನು "ಗಾಥಾಸಪ್ತಶತಿ"ಯಲ್ಲಿ ಬಹು ರಸವತ್ತಾಗಿ ಮಾಡಿರುವನು. ಅಲ್ಲದೆ ಮೇರುತುಂಗಾಚಾರ್ಯ ವಿರಚಿತ 'ಪಟಾವಲಿ' ಯಲ್ಲಿಯೂ ವಿಕ್ರಮಾದಿತ್ಯನ ಬಗೆಗೆ ಪ್ರಾಮಾಣಿಕ ವರ್ಣನೆಯಿದೆ. ಅಂದರೆ—

..........ನಭೋವಾಹನನ ನಂತರ ಗರ್ದಭಿಲ್ಲ'ನು ಹದಿಮೂರು ವರ್ಷಗಳ ವರೆಗೆ ರಾಜ್ಯವನ್ನಾಳಿದನು. ಅನಂತರ ಉಜ್ಜಯಿನಿಯಲ್ಲಿ ಅರವತ್ತು ವರುಷಗಳ ವರೆಗೆ 'ಶಕ'ರ ರಾಜ್ಯವಿದ್ದಿತು.(ಆದರೆ ಶಕರ ಆಳಿಕೆಯ ಅವಧಿಯು ಹದಿನಾಲ್ಕು ವರ್ಷಗಳೆಂದು ಬೇರೊಂದು ಕಡೆಗೆ ಹೇಳಲಾಗಿದೆ.) ಗರ್ದಭಿಲ್ಲನ ಮಗನೇ ವಿಕ್ರಮನು...." ಆದರೆ—

'ಕಥಾಸರಿತ್ಸಾಗರ'ದಲ್ಲಿ ವಿಕ್ರಮನ ತಂದೆಯು ಮಹೇಂದ್ರಾದಿತ್ಯ ಹಾಗು ತಾಯಿ ಸೌಂದರ್ಯದರ್ಶನಾ ಎಂದು ಹೇಳಲಾಗಿದೆ. ಅವರೇ

ರ್ವರೂ ಶಿವೋಪಾಸಕರು. ಶಿವನ ಆರಾಧನೆಯಿಂದಲೇ ಆ ದಂಪತಿಗಳು ಮಗುವನ್ನು ಪಡೆದರು. ಅವನ ಹೆಸರು ವಿಕ್ರಮಾದಿತ್ಯ. ಉಪನಾಮವು ವಿಕ್ರಮಶೀಲ. ಅವರ ಧ್ವಜವು 'ಅಪರಾಜಿತ' ವಾಗಿದ್ದಿತು ಅಂತೆಯೇ ವಿಕ್ರಮಾದಿತ್ಯನು ''ಶಕವಧು ವೈಧವ್ಯ ದೀಕ್ಷಾಗುರು" ಅರ್ಥಾತ್ ಶಕರ ಪತ್ನಿಯರಿಗೆ ವೈಧವ್ಯದ ದೀಕ್ಷೆಯನ್ನು ಕೊಡುವಂತಹ ಗುರು ಎಂದು ಕರೆಯಿಸಿಕೊಳ್ಳುತ್ತಿದ್ದನು.

ಗುಣಾಢ್ಯನ ಕೃತಿಯಲ್ಲಿಯೂ ವಿಕ್ರಮನ ಬಗೆಗೆ ಉಲ್ಲೇಖವಿದೆ. ಹಾಗು ಕ್ಷೇಮೇಂದ್ರನ ''ಬ್ರಹತ್ಕಥಾ ಮಂಜರಿ"ಯಲ್ಲಿಯೂ ಬರುವದು. ಕಲ್ಪ ಸೂತ್ರ'ವೆಂಬ ಗ್ರಂಥದಲ್ಲಿ—

"ಗುರ್ಜರ ತಾಮ್ರಲಿಪ್ತ ಕ್ಷಿಂಯ ಕನ್ಯೆ ಮದನ ರೇಖೆಯೊಂದಿಗೆ ಗಂಧರ್ವಸೇನನ ವಿವಾಹವಾಯಿತು. ಈ ದಂಪತಿಗಳ ಉದರದಿಂದಲೇ ವಿಕ್ರಮಾದಿತ್ಯನು ಜನಿಸಿದನು...."ಎಂದು ಹೇಳಲಾಗಿದೆ. ಹಾಗು ಅದೇ ''ಕಲ್ಪಸೂತ್ರ"ದ ಪ್ರಕಾರ—

''ವಿಕ್ರಮನು ಪ್ರಜೆಗಳ ಋಣವನ್ನು ಸರಿಯಾಗಿ ತೀರಿಸಿದನು, ಇವನ- ವಿಕ್ರಮಾದಿತ್ಯನ- ಹೆಸರಿನ ಸಂವತ್ಸರವೂ ಪ್ರಾರಂಭವಾಯಿತು. ಇವನು ೫೭ (B. C.) ರಲ್ಲಿ ಶಕರನ್ನು ಸೋಲಿಸಿದನು. ಹಾಗು ೧೧೧ ವರ್ಷಗಳ ವರೆಗೆ ರಾಜ್ಯಭಾರ ಮಾಡಿದನು...."

ವಿಕ್ರಮಾದಿತ್ಯನ ಕಾಲದಲ್ಲಿ ಉಜ್ಜಯಿನಿಯನ್ನು ವಿಕ್ರಮಪುರ ಮತ್ತು ವಿಕ್ರಮ ಪಟ್ಟಣಗಳೆಂದು ಕರೆಯುತ್ತಿದ್ದರೆಂದೂ ನಾಲ್ಕಾರು ಕಡೆಗೆ ಉಲ್ಲೇಖಗಳು ದೊರೆಯುತ್ತವೆ.

ಹದಿಮೂರನೆಯ ಶತಮಾನದಲ್ಲಿ ಬರೆಯಲ್ಪಟ್ಟ ''ಪ್ರಭಾವಕ ಚರಿತ್ರ" ವೆಂಬ ಜೈನ ಗ್ರಂಥದಲ್ಲಿ ''ಕಾಲಕಾ ಚಾರ್ಯನ ಮಿತ್ರ ಶಾಹೀ ಪತಿಯಿಂದ ಗರ್ದಭಿಲ್ಲನು ಸೋಲಿಸಲ್ಪಟ್ಟನು" ಎಂದು ಹೇಳಲಾಗಿದೆ. ಕ್ರಿಸ್ತ ಪೂರ್ವ (B. C.) ರಲ್ಲಿ ಶಕರು ಉಜ್ಜಯಿನಿಯಲ್ಲಿ ರಾಜ್ಯವಾಳುತ್ತಿದ್ದರು. ಅವರು

ಶಕರು—ಸುಮಾರು ಹದಿನಾಲ್ಕು ವರ್ಷಗಳ ವರೆಗೆ ಆ ನಗರದಲ್ಲಿ—ಉಜ್ಜಯಿನಿಯಲ್ಲಿ—ಶಾಸನವನ್ನು ನಡೆಯಿಸಿದರು. ಆದರೆ ವಿಕ್ರಮನ ಆಳಿಕೆಯ ಬಗ್ಗೆ ಬೌದ್ಧ ಹಾಗು ಪುರಾಣ ಗ್ರಂಥಗಳು ಮಾತ್ರ ಮೌನವಾಗಿರುವವು.

ಶಕರ ಆಳಿಕೆಯು ಕ್ರೂರತನ ಹಾಗು ಕಠೋರತೆಗಳಿಂದ ಕೂಡಿತ್ತೆಂದು ಐತಿಹಾಸಿಕ ಗ್ರಂಥಗಳು ಸಾರಿ ಹೇಳುತ್ತವೆ. ಅವರು—ಶಕರು—ಬೋಲಿನ ಘಟ್ಟದ ಮಾರ್ಗವಾಗಿ ಸಿಂಧದೊಳಗಿಂದ ಭಾರತಕ್ಕೆ ಬಂದರು. ಕ್ರಿಸ್ತ ಪೂರ್ವ (B. C.) ೧೨೦ ರಲ್ಲಿ ಮಾವುವಸನೆಂಬ ಶಕರಾಜನು ತಕ್ಷಶಿಲೆಯಲ್ಲಿ ರಾಜ್ಯವಾಳುತ್ತಿದ್ದನು. ಅನಂತರ ಅಲ್ಲಿ—ತಕ್ಷಶಿಲೆಯಲ್ಲಿ—ಕುಲಸಕ ವಂಶದ ಮಹಾ ಕ್ಷತ್ರಪ ತಿಲಕ ಮತ್ತು ಪತಿಕರ ಪ್ರಾಬಲ್ಯವೆ ಹೆಚ್ಚಾಯಿತು. ಅರ್ಥಾತ್ ಅವರ ಕೈ ಮೇಲಾಯಿತು.

ಶಕರ ಎರಡನೆಯ ಕೇಂದ್ರ ಸ್ಥಾನವು ಮಥುರೆಯಾಗಿತ್ತು. ಅಲ್ಲಿ ಖರವೋಸ, ಹಗಾಮ ಹಾಗು ಹಗಾಮಸ ಕ್ಷತ್ರಪರೆಂಬವರು ಮುಖ್ಯರಾಗಿದ್ದರು. ರಾಜಬುಲ ಮತ್ತು ಶೋಡಾಸ ಮಹಾಕ್ಷತ್ರಪರು ಅಲ್ಲಿಯ ಮೂಲ ಪುರುಷರು. ಖರಹೋಸನು ರಾಜಬುಲನ ಮಗನಾಗಿದ್ದು ಅವನಿಗೊಬ್ಬ ಸೋದರನೂ "ಹನ"ಳೆಂಬ ಸೋದರಿಯೂ ಇದ್ದರು. (B. C.) ೧೦೦ ರಲ್ಲಿ ಅವರು ಮಥುರೆಯಲ್ಲಿ ಆಳುತ್ತಿದ್ದರು. ಅನಂತರ ೮೮ H. C. ಯಲ್ಲಿ ಶಕರು ಬ್ಯಾಕ್ಟ್ರಿಯಾನರೇಶ ಹಾಗು ಮಿಥ್ರ ಡೇಟಸ್‍ರಿಂದ ಸ್ವತಂತ್ರರಾದರು.

ಸಿಂಧದಿಂದ ಭಾರತದೊಳಗೆ ಪ್ರವೇಶಿಸಿದ ಎರಡು ತಂಡಗಳು ಮೇಲೆ ಹೇಳಿದ ರೀತಿಯಲ್ಲಿ ಬೇರೆ ಬೇರೆ ಕಡೆಗೆ ಹೊಂದಿಕೊಂಡರೆಂದು ಹೇಳಿಯಾಯಿತಷ್ಟೆ. ಅದೇ ರೀತಿಯಾಗಿ ಮೂರನೆಯ ಗುಂಪು `ಸೌರಾಷ್ಟ್ರದ ಕಡೆಗೆ ತಿರುಗಿತು. ಅಲ್ಲಿ-ಸೌರಾಷ್ಟ್ರದಲ್ಲಿ—ಭೂಮಕನೆಂಬವನ ಪ್ರಾಮುಖ್ಯತೆಯಿದ್ದಿತು. ಮಥುರೆಯ ಶಕರ ಆಡಳಿತವು ಉತ್ತರ ಮಾಳವಾದ ವರೆಗೆ ಇದ್ದಿತು. ಅಲ್ಲಿಯು ಖರವೋಸನ ಜೊತೆಗೇ ವಿಕ್ರಮಾದಿತ್ಯನು ಯುದ್ಧ ಮಾಡಿ ಅವನನ್ನು ಸೋಲಿಸಿದನು.

ರಾಜ ಬುಲನ ರಾಣಿ "ನಂದಿ ಶಿವಯಸೆ"ಯು ಬೌದ್ಧ ಧರ್ಮದವಳಾಗಿದ್ದಳು. ಅವಳು ಒಂದು ಬೌದ್ಧ ಸ್ತೂಪವನ್ನು ಕಟ್ಟಿಸಿದಳೆಂದು ಮಥುರೆಯದೊಂದು ಸಿಂಹದ ಮೂರ್ತಿಯಲ್ಲಿ ಉಲ್ಲೇಖವಿದೆ. ಆ ರಾಣಿಯ ತಂದೆಯ ಹೆಸರು "ಆಯಸಿ ಕೋಮುಸಾ" ಎಂದಿದ್ದು ತಾಯಿಯದು "ಆಬೂಲಿ"ಯಾಗಿತ್ತು ಶಕರ ಕಾಲದಲ್ಲಿ ರಚಿತವಾದ ಅವರ ಮೂರ್ತಿಗಳಿದ್ದು ಅವುಗಳಿಗೆ ಮೀಸೆಗಳಾಗಲಿ, ಗಡ್ಡಗಳಾಗಲಿ ಕಂಡು ಬರುವದಿಲ್ಲ. ರಾಜ ಬುಲನು ತನ್ನ ಹೆಸರಿನ ನಾಣ್ಯಗಳನ್ನು ಚಲಾವಣೆಯಲ್ಲಿ ತಂದನು. ಅವುಗಳಲ್ಲಿ ಅಂದರೆ ಆ ನಾಣ್ಯಗಳ ಮೇಲೆ "ಅಪುತಿ ಹತ ಜವುಲ ಕ್ಷತ್ರಪಸ ರಾಜ ಬುಲನ" ಎಂದು ಬರೆಯಲಾಗಿದೆ- ಅವನು –ರಾಜ ಬುಲನು— ಭೂಮಕನ ಸಹಾಯದಿಂದ ಗರ್ದಭಿಲನನ್ನು ಗೆದ್ದನು. "ಜವುಲ" ಶಬ್ದದ ಅರ್ಥವು ವಿಜಯಿ ಎಂಬುದಾಗಿದೆ.

ತಕ್ಷಶಿಲೆಯ ಶಕರು ಕುಸುಲಕ ವಂಶೀಯರೆಂದು ಕರೆಯಿಸಿಕೊಳ್ಳುತ್ತಾರೆ. ಅವರ ಹೆಸರುಗಳು ಕ್ಷತ್ರಪ ತಿಲಕ, ಕ್ಷತ್ರ ಪ ಪತಿಕ ಎಂದಾಗಿದೆ. ಇವರೀರ್ವರೂ ಬೌದ್ಧರಾಗಿದ್ದರು. ಈ ಉಲ್ಲೇಖನವು ತಕ್ಷಶಿಲೆಯಲ್ಲಿ ಕ್ರಿಸ್ತಪೂರ್ವ (B. C.) ೭೮ ರ ಪತಿಕನ ತಾಮ್ರಪತ್ರದಲ್ಲಿರುವದು.

ಮಥುರೆಯ ಶಕರು ಕುನಿಂದರೊಂದಿಗೂ ಯುದ್ಧ ಮಾಡಿದರು. ಕುನಿಂದ ರಾಜ್ಯವು ಆಗ "ಗಣ ರಾಜ್ಯ"ವಾಗಿತ್ತು. ಅದು ಈಗಿನ ಕುರಕ್ಷೇತ್ರದಿಂದ ಅಂಬಾಳಾದ ವರೆಗಿನ ಪ್ರದೇಶವಾಗಿತ್ತು. ಈ ಗಣರಾಜ್ಯವು ಶಕರಿಂದಲೇ ಹಾಳಾಯಿತೆಂದು ಗಾರ್ಗಿ ಸಂಹಿತೆಯ ಯುಗ ಪುರಾಣದಿಂದ ಗೊತ್ತಾಗುವದು.

ಸಿಂಧದಿಂದ ಮಥುರೆ. ಸೌರಾಷ್ಟ್ರ ಹಾಗು ತಕ್ಷಶಿಲೆಗಳ ವರೆಗೆ ಹಬ್ಬಿದ ಶಕರ ಬಗ್ಗೆ ಪೇರಿಪ್ಲಸ ದಲ್ಲಿಯೂ ಕೂಡ—

"ಸಿಂಧವು ಶಕರ ಮೂಲಸ್ಥಾನ ವೇನೋ ಎಂಬಂತೆ ಭಾಸವಾಗುತ್ತಿತ್ತು. ಶಕರು ಸೌರಾಷ್ಟ್ರದಲ್ಲಿ ವೃಷ್ಣಿ ಹಾಗು ಕುಕೂರವಂಶದ ಕ್ಷತ್ರಿಯ ಅರಸರನ್ನು ಸೋಲಿಸಿದರೆಂದು ಉಲ್ಲೇಖಿಸಲಾಗಿರುವದು.

ಮಥುರೆಯ ಹಿಂದೂ ಅರಸರ ನಾಣ್ಯಗಳೂ ದೊರೆತಿದ್ದು ಅವುಗಳಲ್ಲಿ

ಹೆಸರುಗಳು ಬಹುತರವಾಗಿ 'ಮಿತ್ರ' ಶಬ್ದದಿಂದ ಮುಕ್ತಾಯಗೊಳ್ಳುವವು. ಅವುಗಳ ಆಧಾರದಿಂದ ಮಿತ್ರರ ರಾಜ್ಯವು ಮಥುರೆಯಲ್ಲಿ ಸುಮಾರು ಒಂದು ನೂರು ವರುಷಗಳ ವರೆಗೆ ಇದ್ದಿತು. (ಅಂದರೆ ಆ ನಾಣ್ಯಗಳ ಪುಷ್ಯ ಮಿತ್ರ ಶುಂಗವಂಶದ ವಂಶಧರರೆಂಬುದು ಗೊತ್ತಾಗುವದು.) ಈ ಅರಸರನ್ನು ಕೂಡ ಶಕರೇ ಸೋಲಿಸಿ ಅಲ್ಲಿಯೂ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು.

ರಾಜ ಬುಲನ ಮಗ ಖರವೋಸನು ಕೇವಲ ಕ್ಷತ್ರಪನೆನ್ನಿಸಿಕೊಂಡನು. ಆದರೆ ಅವನ ತಂದೆಯು ಮಹಾಕ್ಷತ್ರಪನಾಗಿದ್ದನು. ರಾಜ ಬುಲನ ಸೋದರ ಶೋಡಾಸಣ ಮಹಾಕ್ಷತ್ರಪನಾಗಿದ್ದನು. ಇದರ ಮೇಲಿಂದ ಖರವೋಸನು ತಂದೆಯ ತರುವಾಯ ಬಾಳಲಿಲ್ಲವೆಂಬುದು ವ್ಯಕ್ತವಾಗುವದು. ಅದಕ್ಕಾಗಿಯೇ ರಾಜಬುಲನ ಸೋದರ ಶೋಡಾಸನು ಉತ್ತರಾಧಿಕಾರಿಯಾದನು ಮಹಾಕ್ಷತ್ರಪನ ಮಕ್ಕಳು, ತಂದೆಯು ಜೀವಿಸುವಾಗ "ಕ್ಷತ್ರಪ"ರೆಂದು ಕರೆಯಿಸಿಕೊಳ್ಳುತ್ತಿದ್ದರು.

ಈ ರೀತಿಯಾಗಿ ಶಕರು ಉತ್ತರ ಭಾರತದ ತುಂಬ ಹರಿಬಿದ್ದು ಕೊಳ್ಳಿ ಕೊಳೆ—ಸುಲಿಗೆಗಳನ್ನು ಪ್ರಾರಂಭಿಸಿದ್ದರು. ಅದರಿಂದಾಗಿ ಅಲ್ಲಿಯ ಜನತೆ ಬೇಸತ್ತು ಹೋಗಿದ್ದಿತು. ಅಂಥ ಸಮಯದಲ್ಲಿ ಶಕಾರಿಯಾದ ವಿಕ್ರಮನು ಇವರನ್ನು ತಿರುಗಿ ಮೇಲಕ್ಕೇಳದಂತೆ ತುಳಿದು ಬಿಟ್ಟನು. ಅಂತೆಯೇ ಅವರಿಗೆ ಅಂದರೆ ಶಕರಿಗೆ ಸುಮಾರು ೧೫೦ ವರ್ಷಗಳ ವರೆಗೆ ತಮ್ಮ ತಲೆಯನ್ನು ಮೇಲಕ್ಕೆತ್ತಲೂ ಸಾಧ್ಯವಾಗಲಿಲ್ಲವೆಂಬುದು ಇತಿಹಾಸದಿಂದ ಗೊತ್ತಾಗುವದು. ಆಗ ವಿಕ್ರಮನಿಗೆ ಅಮರಗುಪ್ತನೆಂಬ ಮಹಾ ಚತುರ ಮಂತ್ರಿಯಿದ್ದು ಅರಸನಿಗಾಗಿ-ವಿಕ್ರಮನಿಗಾಗಿ—ತನ್ನ ಮಗನನ್ನೇ ಬಲಿಕೊಟ್ಟ ವೀರವರನಂತಹ ನೂರಾರು ವಿಶ್ವಾಸುಕ ಸೇವಕರೂ ಇದ್ದರು.

"ಕಥಾ ಸರಿತ್ಸಾಗರ"ದ ಪ್ರಕಾರ ವಿಕ್ರಮಾದಿತ್ಯನು ವಿಕ್ರಮಾರ್ಕನೆಂದೂ ಕರೆಯಿಸಿಕೊಳ್ಳುತ್ತಿದ್ದನು. ಅವನು—ವಿಕ್ರಮಾರ್ಕನು ಮಹಾಕಾಲೇಶ್ವರ ಹಾಗು ಶಕ್ತಿಯ ಅನನ್ಯ ಭಕ್ತನಾಗಿದ್ದನು. ಇವನು ಶೂರ ನಿರ್ಭೀತಿ ನ್ಯಾಯ ಶೀಲನೂ ಆಗಿದ್ದನು. ಅವರ ಶಿಕ್ಷಿಸುವ ಸಮಯದಲ್ಲಿ

ಮಾತ್ರ ಅವನು ಬಹು ಮೃದು ಹೃದಯದವನಾಗುತ್ತಿದ್ದನೆಂಬುದು "ಸರಿತ್ಸಾಗರದ" ಒಂದು ಶ್ಲೋಕದಿಂದ ಗೊತ್ತಾಗುವದು. ಅವನ ಆಸಕ್ತಿಯು ಯಾವಾಗಲೂ ಧರ್ಮದ ಕಡೆಗೆ ಇದ್ದಿತೇ ವಿನಾ ಮೃಗಗಳ ಬೇಟೆ ಇಲ್ಲವೆ ಸುಂದರ ತರುಣಿಯರ ಕೂಟದತ್ತ ಇರಲಿಲ್ಲ. ಅವನ ಕಾಲದಲ್ಲಿ ಎಲ್ಲೆಡೆಗೂ ಧಾರ್ಮಿಕತೆ, ಹಾಗು ವಿಶ್ವಾಸಾತ್ಮಿಕತೆಗಳು ಕಂಡು ಬರುತ್ತಿದ್ದವು. ಉನ್ನತವಾದ ಮಹಾಕಾಲೇಶ್ವರನ ಮಂದಿರವಿದ್ದಿತು. ರಾಜಧಾನಿಯಲ್ಲಿ ಕೈಲಾಸದಂತಹ ಉಚ್ಚ ಶ್ವೇತ ಪ್ರಾಸಾದಗಳೂ ಇದ್ದವು.

ವೀರ ವಿಕ್ರಮಾದಿತ್ಯನು B. C. ೫೭ ರಲ್ಲಿ ಭಾರತದೊಳಗಿನ ಶಕರ ಶಾಸನವನ್ನು ಸಂಪೂರ್ಣವಾಗಿ ನಿಲ್ಲಿಸಿ ಬಿಟ್ಟನು. ಅನಂತರ ಅವನ ರಾಜ್ಯವು ೭೮ ನೇಯ ಇಸ್ವಿಯ ವರೆಗೂ ಇದ್ದಿತು. ವಿಕ್ರಮನ ಹೊರ್ತು ಶಕರು ಆಗ ಬೇರೆ ಯಾರಿಗೂ ಸೋತಿರಲಿಲ್ಲವೆಂಬುದು ಗಮನಿಸತಕ್ಕ ವಿಷಯವಾಗಿದೆ. ಮುಂದೆ ವಿಕ್ರಮನ ನಂತರ ಮತ್ತೆ ಶಕರ ಅರಸು ರುದ್ರಸಿಂಹನೆಂಬವನು ಕ್ರಿ. ಶ. ೧೨೭ ರಲ್ಲಿ ಮಾಳವದ ಅರಸರನ್ನು ಸೋಲಿಸಿದನು.

ಇದರ ಮೇಲಿಂದ ವ್ಯಕ್ತವಾಗುವದೇನಂದರೆ, B. C. ೫೭ ರಲ್ಲಿ ವಿಕ್ರಮಾದಿತ್ಯನಿಂದ ಸೋಲಿಸಲ್ಪಟ್ಟ ನಂತರ ಕ್ರಮೇಣ ಪ್ರಬಲರಾದರು. ಅವರಲ್ಲಿ ಕುನಿಂದನೆಂಬುವನು ಪ್ರಬಲನಾಗಿದ್ದು ಅವನ ಹೆಸರಿನ ಸಂವತ್ಸರವೂ ನಡೆಯಿತು.

(ವಿಕ್ರಮ ಸಂವತ್ಸರವು ಮೂರನೆ ನಾಗು ದಿಾಲ್ಕನೆಯ ಶತಮಾನದ ವರೆಗೆ "ಕೃತ ಸಂವತ್' ಎಂದೆನ್ನಿಸುತ್ತಿತ್ತು. ಅನಂತರ "ಮಾಳವ"ವೆಂದೂ ಕರೆಯಿಸಿಕೊಂಡಿತು. ಹಾಗಾಗಲು ಕಾರಣವೇನಂದರ ಆಗಿನ—ನಾಲ್ಕನೆಯ ಶತಮಾನದ—ಗುಪ್ತರ ರಾಜ್ಯ ಕಾಲದಲ್ಲಿ ಉತ್ತರ ಹಾಗು ಮಧ್ಯ ಭಾರತಗಳಲ್ಲಿ ಗುಪ್ತ ಸಂವತ್ಸರವು ಪ್ರಾರಂಭವಾದುದರಿಂದ, ಕೇವಲ ಮಾಳವದಲ್ಲಿಯೇ ಕೃತ ಸಂವತ್ಸರವು ನಡೆಯುತ್ತಿದುದರಿಂದ ಮಾಳವವೆಂದು ಕರೆಯಿಸಿಕೊಂಡಿರಬೇಕು

ಮುಂದೆ ಇದು ಒಂಭತ್ತನೆಯ ಶತಮಾನದಲ್ಲಿ ಅಂದರೆ ೮೯೮ ನೆಯ ಇಸ್ವಿಯಲ್ಲಿ ವಿಕ್ರಮ ಸಂವತ್ಸರವೆಂದು ಕರೆಯಿಸಿಕೊಳ್ಳತೊಡಗಿತು. ಅಲ್ಲದೆ

ಮತ್ತೆ ಕೆಲವು ಸಲ ಮಾಲವೇಶವೆಂದೂ ಕರೆಯಿಸಿಕೊಂಡಿತು. ಹನ್ನೊಂದು ಹಾಗು ಹನ್ನೆರಡನೆಯ ಶತಮಾನಗಳಲ್ಲಿ ವಿಕ್ರಮೀಯ ಸಂವತ್ ಎಂಬುದು ಬಹು ಪ್ರಚಾರಕ್ಕೆ ಬಂದಿತು. ಅಲ್ಲಿಂದ ಇಂದಿನ ವರೆಗೂ ಅದು ಹಾಗೆಯೇ ಉಳಿದು ಬಂದಿರುವದು.)

ವೀರ ವಿಕ್ರಮಾದಿತ್ಯನು ೨೮ ನೆಯ ಇಶ್ವಿಯಲ್ಲಿ ತೀರಿಕೊಂಡನು. ಆಗ ಅವನಿಗೆ ಒಂದು ನೂರಾ ಹನ್ನೊಂದು ವರ್ಷಗಳಾಗಿದ್ದವು. ಇವನು ಸೌರಾಷ್ಟ್ರ, ಮಧುರೆ ಹಾಗು ತಕ್ಷ ಶಿಲೆಯ ಶಕರನ್ನು ಸೋಲಿಸಿದ್ದಲ್ಲದೆ ಮಾಳವ ರಾಜ್ಯದಲ್ಲಿದ್ದ ಅವಂತಿಯ ಶಕರನ್ನೂ ಉದ್ಧಾರ ಮಾಡಿ ಅದನ್ನು ಅವಂತಿಯನ್ನು ತನ್ನ ತಮ್ಮನಿಗೊಪ್ಪಿಸಿದನು. ಹಾಗು ಅಲ್ಲಿಯ ಅರಸು ಕನ್ಯೆಯ ವಿವಾಹವನ್ನು ತನ್ನ ತಮ್ಮನೊಂದಿಗೆ ವಿಜೃಂಭಣೆಯಿಂದ ಮಾಡಿದನು.

ವಿಕ್ರಮಾದಿತ್ಯನ ಆ ಸೋದರನೆ ಭರ್ತೃಹರಿ. ಶಕ ಕನ್ಯೆಯೇ ಪಿಂಗಳೆ.

# ೧

ಸಾಯಂಕಾಲದ ಸಮಯ

ಪಶ್ಚಿಮ ದಿಗಂಗನೆಯೊಂದಿಗೆ ಬೆರೆಯಲು ಆತುರಗೊಂಡಿದ್ದ ಸುಮನೋಹರವಾದ ಸೂರ್ಯಬಿಂಬವು ಇನ್ನೇನು ಕಾಣಿಸತೊಡಗಿತ್ತು. ಅದರ ಬಂಗಾರ ವರ್ಣದ ಕಿರಣಗಳು, ಅವಂತಿನಗರದ ರಾಜೋದ್ಯಾನದ ತುಂಬೆಲ್ಲ ಬಂಗಾರವನ್ನು ಚೆಲ್ಲಿವಂತೆ ಹರಡಿದ್ದವು. ಆದರಿಂದಾಗಿ ಮೊದಲೇ ನಯನ ಮನೋಹರವಾಗಿ ಆ ಉದ್ಯಾನಕ್ಕೆ ಮತ್ತಿಷ್ಟು ಕಳೆ ಬಂದಿತ್ತು. ಅತಿ ರಮಣೀಯವಾಗಿದ ಕಂಗೊಳಿಸುತ್ತಿತ್ತು.

ಆ ವನದಲ್ಲಿ ಹಲಸು, ಪಾಟಲ, ಪ್ರಿಯಂಗು, ನಾರಿಕೇಳ, ಲವಂಗ, ಕೇತಕಿ, ಕದಂಬಿ, ಕಪಿತ್ಥ, ಅಶ್ವತ್ಥ, ಜಂಬು, ಜಂಬೀರ, ಆಮ್ರ, ಪ್ರಿಯಾಳು ಹಾಗು ಸ್ಯಂದನಗಳೇ ಮೊದಲಾದ, ನವಪಲ್ಲವಗಳ ಶಾಖೆಗಳಿಂದ ಕಣ್ಮನಗಳ ದಾಹವನ್ನು ಹಿಂಗಿಸುವಂಥ ವೃಕ್ಷಗಳು ಇಂದ್ರನ ನಂದನವನವನ್ನು ಹೀಯಾಳಿಸುವೋಪಾದಿಯಲ್ಲಿ ತಲೆ ಎತ್ತಿ ನಿಂತುಕೊಂಡಿದ್ದವು.

ಆ ವೃಕ್ಷಗಳಲ್ಲಿಯ ಗೂಡುಗಳಲ್ಲಿ ಮರಿಗಳಿಗೆ ಗುಟ್ಕೆಯನ್ನಿಕ್ಕುವ ಪಕ್ಷಿಗಳ ಧ್ವನಿ ಹಾಗು ಅವುಗಳ ರೆಕ್ಕೆಗಳ ಪಟ–ಪವಾರವವು ಆಗಾಗ ಕೇಳಬರುತ್ತಿದ್ದಿತು. ಪಕ್ವವಾದ ಫಲಗಳ ಭಾರದಿಂದ ಬಾಗಿರುವ ಶಾಖೆಗಳೂ, ಅವುಗಳಲ್ಲಿ ಪುಷ್ಪಗಳ ಗೊಂಚಲುಗಳಲ್ಲಿ ದುಂಬಿಗಳು ಪುಷ್ಪಗಳ ಮಧುವನೀಂಟಿ ಮತ್ತವಾಗಿ ಮಾಡುತ್ತಿರುವ 'ಗ್ಣೊಕಾರ'ದ ಗಾನವೂ ಕೇಳ ಬರುತ್ತಿದ್ದಿತು. ಕೋಗಿಲೆಗಳ ಮಂಜುಳವಾದ 'ಕುಹು' ರವವೂ ಮಧ್ಯ ಮಧ್ಯ ಕೇಳಬರುತ್ತಿತ್ತು.

ಅಲ್ಲದೆ ಸಂಪಿಗೆ, ಸೇವಂತಿಗೆ, ಗಿರಿಮಲ್ಲಿಗೆ, ಮಲ್ಲಿಗೆ, ಜಾಜಿ ಮಲ್ಲಿಗೆ, ಸೂಜಿ ಮಲ್ಲಿಗೆಗಳೇ ಮೊದಲಾದ ನಾನಾಬಗೆಯ ಪುಷ್ಪವಲ್ಲರಿಗಳಿಗೂ ಅಲ್ಲಿ

ಕೊರತೆ ಇರಲಿಲ್ಲ. ಸಾಯಂಕಾಲದ ಮಂದ ಮಾರುತನು ಎಲ್ಲ ಬಗೆಯ ಪುಷ್ಪಲತೆಗಳ ಮೇಲ್ಹಾಯ್ದು ಹೊತ್ತು ತರುತ್ತಿದ್ದ ಪರಿಮಳವು ಎಂಥವರ ಮಾನಸವನ್ನೂ, ಉಲ್ಲಸಿತಗೊಳಿಸುತ್ತಿತ್ತು. ಅವರ ದಣಿವನ್ನು, ಮನವ ಬೇಸರಿಕೆಯನ್ನು ಹೊಡೆದೋಡಿಸುವಂತಿತ್ತು. ಆದರೂ....

ಅಂತಹ ನಿಸರ್ಗ ರಮಣೀಯ ಸ್ಥಾನದಲ್ಲಿ ಮಲ್ಲಿಗೆ ಬಳ್ಳಿಯಿಂದ ರಚಿತವಾಗಿರುವ ಮಂಟಪದ ಅಡಿಯಲ್ಲಿ ಅಮೃತ ಶಿಲೆಯಿಂದ ನಿರ್ಮಿಸಲಾಗಿರುವಂಥ ಸುಖಾಸನದ ಮೇಲೆ ಕುಳಿತುಕೊಂಡಿದ್ದ ಶಕ ಕನ್ಯೆ, ಮಹಾರಾಜಾ ಭರ್ತೃಹರಿಯ ಕಿರಿಯಪತ್ನಿ ಪಿಂಗಳೆಯ ಮುಖದ ಮೇಲೆ ಮಾತ್ರ ಯಾವುದೋ ಬಗೆಹರಿಯದಂತಹ ಚಿಂತೆಯು ಎದ್ದು ಕಾಣುತ್ತಿತ್ತು. ಕಾಂತಿಯುತವಾದ ಅವಳ ಮುಖವು, ಆವರಿಸಿದ ಚಿಂತೆಯಿಂದಾಗಿ ಮೋಡ ಮುಸುಕಿದ ಚಂದ್ರಬಿಂಬದಂತೆ ಕಾಣಿಸುತ್ತಿತ್ತು.

ಪಿಂಗಳೆಯ ಎದುರಿಗೆ, ಅನತಿ ದೂರದಲ್ಲಿದ್ದ ಚಂದ್ರಶಿಲೆಯ ಆಸನದ ಮೇಲೆ ಓರ್ವ ತರುಣನು ಅಧೋಮುಖನಾಗಿ ಕುಳಿತುಕೊಂಡಿದ್ದನು. ಈರ್ವರ ಮುಖಗಳೂ ಯಾವುದೋ ಅವ್ಯಕ್ತ ದುಃಖದಿಂದ ಬಾಡಿದಂತೆ ಕಂಡು ಬರುತ್ತಿದ್ದವು. ಅಷ್ಟೊಂದು ವಿಸ್ತಾರವಾದ ಉದ್ಯಾನದಲ್ಲಿ ಇವರೀರ್ವರನ್ನುಳಿದು ಬೇರಾರೂ ಇರಲಿಲ್ಲ. ಆದರೂ ಅವರು ಮಾತನಾಡದೆ ಸುಮ್ಮನೆ ಕುಳಿತುಕೊಂಡಿದ್ದರು.

ಹಾಗೆಯೇ ಇನ್ನು ಎಷ್ಟು ಸಮಯದ ವರೆಗೆ ಕುಳಿತುಕೊಳ್ಳುತ್ತಿದ್ದರೋ ಏನೋ ? ಆದರೆ ಪಿಂಗಳೆಗೆ ಮೌನವು ಸಹಿಸವಂತಾಗಿ—

"ರಾಹುಲ ! ನೀನು ಅವಂತಿ ನಗರಕ್ಕೆ ಬಂದುದು ಒಳ್ಳೆಯದಾಗಲಿಲ್ಲ ! ಕೇವಲ ಬಂದು ಹೋಗಿದ್ದರೆ ನನ್ನದೇನೂ ಆಕ್ಷೇಪವಿರಲಿಲ್ಲ. ಆದರೆ ನೀನು ಮಹಾರಾಜರಲ್ಲಿ ಅಶ್ವಪರೀಕ್ಷಕನಾಗಿ ಸೇರಿಕೊಂಡದ್ದು ನನಗೆ ಎಳ್ಳಷ್ಟೂ ಸೇರಿಕೆಯಿಲ್ಲ !" ಎಂದಳು.

ಆ ವರೆಗೂ ತಲೆ ತಗ್ಗಿಸಿಕೊಂಡು ನೆಲವನ್ನೇ ನೋಡುತ್ತ ಕುಳಿತು ಕೊಂಡಿದ್ದ ಯುವಕ ರಾಹುಲನು ಮುಖವನ್ನೆತ್ತಿ ಪಿಂಗಳೆಯತ್ತ ದೃಷ್ಟಿ ಹಾಯಿಸಿದನು. ಒಂದು ಕ್ಷಣದ ವರೆಗೆ ಅವಳನ್ನೇ ನೋಡುತ್ತಿದ್ದು, ಅನಂತರ—

"ಪಿಂಗಳಾ !........"

"ನೀನು ತಪ್ಪುತ್ತಿರುವೆ ರಾಹುಲ! ಈಗ ನಾನು ನಿನ್ನ ಪಾಲಿಗೆ ಪಿಂಗಳೆ ಯಲ್ಲ. ಮಹಾರಾಣಿ. ನಿನಗೆ ಅನ್ನವನ್ನಿಕ್ಕುವ ಅರಸು ಭರ್ತೃಹರಿಯ ಕಿರಿಯ ಪತ್ನಿ. ಈ ಮಾತನ್ನು ಚನ್ನಾಗಿ ಜ್ಞಾಪಕದಲ್ಲಿರಿಸಿಕೊಂಡು ಮಾತ ನಾಡು!" ಎಂದು ಪಿಂಗಳೆ ಮಧ್ಯದಲ್ಲಿಯೇ ನುಡಿದಳು. ಆಗ ಅವಳ ಕಣ್ಣು ಗಳು ಸ್ವಾಭಾವಿಕವಾಗಿಯೆ ಕೆಂಪಗಾಗಿ ಬಿಟ್ಟಿದ್ದವು.

ಪಿಂಗಳೆಯ ಕಣ್ಣುಗಳಲ್ಲಿ ತುಂಬಿದ್ದ ಕೋಪವನ್ನು ಕಂಡು ರಾಹುಲ ಬೆಚ್ಚಿಬಿದ್ದ. ಕೂಡಲೆ ಅವನು—

"ತಪ್ಪಾಯಿತು ಮಹಾರಾಣಿ! ದಯವಿಟ್ಟು ನನ್ನನ್ನು ಕ್ಷಮಿಸಬೇಕು." ಎಂದು ನುಡಿದು ಕುಳಿತ ಆಸನವನ್ನು ಬಿಟ್ಟು ಎದ್ದು ನಿಂತು ಕೈಗಳನ್ನು ಜೋಡಿಸಿದ.

'ರಾಹುಲನ ಅವಿಧೇಯತೆಯನ್ನು ಕಂಡು ಪಿಂಗಳೆಗೆ ಅಚ್ಚರಿಯಾ ಯಿತು. ಅಂತೆಯೆ ಅವಳು—

"ರಾಹುಲ! ನಿನ್ನ ಬುದ್ಧಿಗೆ ಇಷ್ಟೊಂದು ಮಂಕುತನ ಕವಿದಿದೆಯೆಂ ಬುದು ನನಗೆ ಗೊತ್ತಾಗಿರಲಿಲ್ಲ ಅರಸು ಪ್ರಜಾ ವರ್ಗಕ್ಕೆ ತಂದೆಯಾಗಿರುವಂತೆ ಅವನ ಪತ್ನಿ ತಾಯಿಯಾಗಿರುತ್ತಾಳೆ. ನೀನೂ ಅರಸು ಕುಮಾರನೇ ಇದ್ದು, ಅರಸನ ಪತ್ನಿಯನ್ನು ಯಾವ ರೀತಿಯಿಂದ ಸಂಬೋಧಿಸಬೇಕೆಂಬುದನ್ನು ಮರೆತೆಯಾ? ನಿನ್ನ ರಾಜ್ಯದೊಳಗೆ ನೀನು ಯುವರಾಜನಾಗಿರಬಹುದು. ಆದರೆ ಇಲ್ಲಿ ಓರ್ವ ಪ್ರಜೆಯ ದೃಷ್ಟಿಯಿಂದ ನಾನು ನಿನಗೆ ರಾಜ ಮಾತೆಯಾ ಗಬೇಕು ಆದಕ್ಕಾಗಿ ನೀನು ನನ್ನೊಂದಿಗೆ ಮಾತನಾಡುವಾಗ ಅಷ್ಟು ಗೌರವ

ವನ್ನಿತ್ತರೆ ಸಾಕು.ಅತಿ ವಿನಯ ನನಗೆ ಸೇರುವದಿಲ್ಲ. ಆಯಿತು,ಕುಳಿತುಕೋ. ಅನಂತರ ಇಲ್ಲಿಗೆ ಏತಕ್ಕೆ ಬಂದೆ? ಇಲ್ಲಿ ಏತಕ್ಕೆ ಅಶ್ವ ಪರೀಕ್ಷಕನಾಗಿ ಉಳಿದು ಕೊಂಡೆ? ಎಂಬುದನ್ನು ತಿಳಿಸು"ಎಂದಳು ಗಂಭೀರಳಾಗಿ.

"ಆಯಿತು ರಾಜಮಾತೆ! ತಮ್ಮ ಇಚ್ಛೆಯಂತೆಯೇ ಆಗಲಿ"

ಎಂದು ನುಡಿದ ರಾಹುಲನು ಮತ್ತೆ ಶಿಲಾಸನದ ಮೇಲೆ ಕುಳಿತುಕೊಂಡನು. ಅವನು ಏನು ಹೇಳುವನೋ ಎಂದು ಕಾತುರದಿಂದ ನಿರೀಕ್ಷಿಸ ತೊಡತೊಡಗಿದಳು ಪಿಂಗಳೆ. ಆದರೆ ನಾಲ್ಕಾರು ಕ್ಷಣಗಳು ಉರುಳಿದರೂ ಅವನು ಮೌನಿಯಾಗಿಯೇ ಕುಳಿತುಕೊಂಡಿರುವದನ್ನು ಕಂಡು ಪಿಂಗಳೆಗೆ ತಡೆಯದಂತಾಗಿ—

"ರಾಹುಲ ! ನಾನು ಹೇಳಿದ್ದು ಕೇಳಿಸಲಿಲ್ಲವೆ ? " ಎಂದಳು.

"ರಾಜಮಾತೆಯವರು ತಾವಿನ್ನೂ ರಾಜಕನ್ಯೆಯೆಂದೇ ಭಾವಿಸಿದಂತಿದೆ. ಅಂತೆಯೆ 'ನಾವು' ಎಂಬುದರ ಬದಲು 'ನಾನು' 'ನಾನು' ಎಂದು ಏಕವಚನದಲ್ಲಿಯೇ ಸಂಬೋಧಿಸಿಕೊಳ್ಳುತ್ತಿದ್ದಾರೆ. " ಎಂದು ರಾಹುಲ, ಮುಖದ ಮೇಲೆ ಇಲ್ಲದ ನಗುವನ್ನು ತಂದುಕೊಂಡು.

''ಹೌದು. ಮಾತನಾಡುವಾಗ ನಾವೂ ಕೊಂಚ ತಡವರಿಸಿದೆವೆಂಬುದನ್ನು ಒಪ್ಪಿಕೊಳ್ಳುತ್ತೇವೆ. ನೀನು ಅವಂತಿ ನಗರದಲ್ಲಿರುವಿ ಎಂಬುದು ಕಿವಿಗೆ ಬಿದ್ದ ಕ್ಷಣದಿಂದ ನಮ್ಮ ಮನಸ್ಸೇ ನಮ್ಮಾಧೀನದೊಳಗುಳಿದಿಲ್ಲ. ನಿನ್ನನ್ನು ಯಾವಾಗ ಕಂಡೇವು,ಇಲ್ಲಿಗೆ ಬಂದುದರ ಕಾರಣವನ್ನು ಯಾವಾಗ ಕೇಳೇವು, ಎಂಬ ಆತುರವೇ ಹೆಚ್ಚಾಗಿ ಬಿಟ್ಟಿದೆ. ಅದಕ್ಕಾಗಿಯೇ ನಿನ್ನನ್ನು ಭೆಟ್ಟಿಯಾಗಲು ಸಮಯವನ್ನು ಕಲ್ಪಿಸಿಕೊಳ್ಳಬೇಕಾಯಿತು " ಪಿಂಗಳೆಯೆಂದಳು.

"ರಾಜಮಾತೆಯವರು ನನ್ನನ್ನು ಭೆಟ್ಟಿಯಾಗಿರುವದು ಸಮ್ರಾಟರಿಗೆ ತಿಳಿದಿದೆಯೆ ? " ರಾಹುಲ ಪ್ರಶ್ನಿಸಿದ.

''ಹೌದು ನಾವು ಅವರ ಅಪ್ಪಣೆಯನ್ನು ಪಡೆದುಕೊಂಡ ನಂತರವೇ ಈ ಬಗೆ ಏರ್ಪಾತು ಮಾಡಿದೆವು!"

“ಸಂತೋಷ! ಆದರೆ ರಾಜ ಮಾತೆಯವರಿಗೆ  ನಾನು ಇಲ್ಲಿಗೆ ಬಂದ ಸಂಗತಿಯು ಹೇಗೆ ತಿಳಿಯಿತೆಂದು ಕೇಳಬಹುದೆ?”

“ಆ ಸಂಗತಿಯು ನಮಗೆ ಸಮ್ರಾಟರಿಂದಲೇ ತಿಳಿಯಿತು. ಮೊನ್ನೆಯ ದಿನ ರಾತ್ರಿ ಬೆಳದಿಂಗಳಿನ ತಂಬೆಳಕನ್ನು  ಸವಿಯುತ್ತ ಅರಮನೆಯ ಉಪ್ಪರಿಗೆಯಲ್ಲಿ ಕುಳಿತುಕೊಂಡೆವು. ಆಗ ಅವರೇ ನಮ್ಮೆದುರು ಹೇಳಿದರು.

‘‘ಏನೆಂದು ಹೇಳಿದರು?”

‘‘ಅಶ್ವ ಪರೀಕ್ಷೆಯಲ್ಲಿ ಪರಿಣತನಾದ ಓರ್ವ ಶಕ  ಯುವಕನನ್ನು ಈ ದಿನ ರಾಜ್ಯದ ಸೇವೆಗೆ ಸೇರಿಸಿಕೊಂಡಿರುವದಾಗಿ ಹೇಳಿದರು.”

‘‘ಕೇವಲ ಅಷ್ಟೇ ವಿಷಯದಿಂದ ಬಂದವನು  ನಾನೇ ಎಂದು ತಾವು ಹೇಗೆ ಭಾವಿಸಿದಿರಿ?”

‘‘ಅದೂ ಒಂದು ಮೋಜಿನ ವಿಷಯ. ಸಮ್ರಾಟರು  ನೀನು ತಿಳಿದುಕೊಂಡಿರುವಷ್ಟು ಹೆಡ್ಡರಲ್ಲ. ನೀನು ಓರ್ವ ಸಾಮಾನ್ಯ  ಶಕನೆಂದು ಅವರೆದುರು ಹೇಳಿಕೊಂಡಿದ್ದರೂ ಅವರು ಮಾತ್ರ ನೀನು  ಯಾರು ಎಂಬುದನ್ನು ಕಂಡುಕೊಂಡಿದ್ದಾರೆ!” ಪಿಂಗಳೆಯೆಂದಳು.

ಪಿಂಗಳೆಯ ಮಾತುಗಳನ್ನು ಕೇಳಿ ರಾಹುಲನಿಗೆ  ಗಾಬರಿಯಾಯಿತು ಕೂಡಲೆ ಅವನು—

‘‘ಅಂದರೆ? ಪ್ರಭುಗಳಿಗೆ ನಾನು ಶಕರ ಬೇಹುಗಾರನೆಂಬ ಸಂಶಯವು ಬಂದಿಲ್ಲವಷ್ಟೆ?” ಎಂದ.

‘‘ಹಾಗೇನಿಲ್ಲ.  ಅವರು ಖಡ್ಗವನ್ನು ಹಿಡಿದು ರಣರಂಗದಲ್ಲಿ ನಿಂತಾಗ ಅಂತಕನಂತೆ  ಹೋರಾಡುವಂತೆ  ಲೆಕ್ಕಣಿಕೆಯನ್ನು  ಹಿಡಿದಾಗ ಅಪ್ರತಿಮ ವಿದ್ವಾಂಸರೂ ಆಗುತ್ತಾರೆ.  ಯಾವನಾದರೊಬ್ಬನ ಮುಖವನ್ನು

ನೋಡಿ ಇವನು ಇಂಥವನೇ ಎಂದು ಕಂಡು ಹಿಡಿಯುತ್ತಾರೆ. ಅಷ್ಟೊಂದು ಬುದ್ಧಿವಂತಿಕೆಯು ಅವರಲ್ಲಿ ಮನೆ ಮಾಡಿಕೊಂಡಿದೆ."

"ಹಾಗಿದ್ದರೆ ನಾನು ರಾಜಕುಮಾರನೆಂಬುದನ್ನು ಅವರು ಕಂಡು ಹಿಡಿದರೆ?" ಆಶ್ಚರ್ಯದಿಂದ ಪ್ರಶ್ನಿಸಿದ, ರಾಹುಲ.

'ರಾಹುಲ! ನೀನು ಹುಚ್ಚನಿರುವಿ. ಅವರು, ನೀನು ರಾಜಕುಮಾರನೆಂಬುದನ್ನು ಕಂಡು ಹಿಡಿದುದಲ್ಲದೆ, ನೀನೊಬ್ಬ ಭಗ್ನ ಪ್ರೇಮಿ ಎಂಬುದನ್ನೂ ಕಂಡುಕೊಂಡಿದ್ದಾರೆ."

ಪಿಂಗಳೆಯ ಮಾತುಗಳನ್ನು ಕೇಳಿ ರಾಹುಲನಿಗೆ ಇನ್ನಷ್ಟು ಆಶ್ಚರ್ಯವಾಯಿತು. ಭರ್ತೃಹರಿಯು ನಿಜಕ್ಕೂ ಅಷ್ಟೊಂದು ಬುದ್ಧಿವಂತನಿರಬಹುದೋ, ಇಲ್ಲವೆ ಪಿಂಗಳೆಯು ಹೇಳುತ್ತಿರುವದರಲ್ಲಿ ಉತ್ಪ್ರೇಕ್ಷೆಯಿದೆಯೋ ಎಂಬುದು ಅವನಿಗೆ ಗೊತ್ತಾಗದೆ ದ್ವಿವಿಧದೊಳಗೆ ಸಿಲುಕಿಬಿಟ್ಟನು. ರಾಹುಲನ ಮುಖಭಾವದಿಂದಲೇ ಅವನ ಹೃದಯದೊಳಗೆ ನಡೆದ ತುಮುಲವನ್ನು ಅರಿತುಕೊಂಡ ಪಿಂಗಳೆಯು—

"ರಾಹುಲ! ನಾವು ಹೇಳುತ್ತಿರುವದು ಉತ್ಪ್ರೇಕ್ಷೆಯ ಮಾತು ಎಂದು ನಿನಗೆ ಅನ್ನಿಸುತ್ತಿದೆಯಲ್ಲದೆ!" ಎಂದಳು.

"ಅಹುದು ತಾಯಿ. ನಿಜಕ್ಕೂ ನನಗೆ ಹಾಗೆಯೇ ಅನ್ನಿಸುತ್ತಿದೆ!" ಪ್ರಾಂಜಲ ಮನದಿಂದ ಒಪ್ಪಿಕೊಂಡ ರಾಹುಲ.

"ನೀನು ಇಲ್ಲಿಯೇ ತಪ್ಪುತ್ತೀ ರಾಹುಲ! ಸಮ್ರಾಟರು ಸಾಮಾನ್ಯರಲ್ಲ. "ಶಕರ ಪತ್ನಿಯರಿಗೆ ವೈಧವ್ಯದ ದೀಕ್ಷೆಯನ್ನು ಕೊಡುವ ಗುರುವೆಂದು" ಭಾರತ ವರ್ಷದಲ್ಲಿ ಖ್ಯಾತಿಗೊಂಡಿರುವ ಅಜೇಯ ಚಕ್ರವರ್ತಿಗಳಾದ ವಿಕ್ರಮಾದಿತ್ಯ ಪ್ರಭುಗಳ ಸೋದರರಾದ ನಮ್ಮ ಸಮ್ರಾಟರು ಕಡಿಮೆಯವರೆಂದು ಭಾವಿಸಬೇಡ. ಅವರು ವಿದ್ವತ್ತಿನಲ್ಲಿ ಬ್ರಹಸ್ಪತಿಗೆ ಸರಿಸಮಾನರಾಗಿದ್ದಾರೆ. ಅವರಿಗೆ ತಿಳಿಯಲಾರದ ವಿಷಯವು ಯಾವುದೂ ಇಲ್ಲ. ಇನ್ನೊಂದು ವಿಷಯ.

ಅದನ್ನು ಹೇಳಿದರೆ ನಿನಗೂ ಆಶ್ಚರ್ಯಯಾಗಬಹುದು.

"ನಾವು ಅವಂತಿ ನಗರದ ರಾಜಭವನದೊಳಗೆ ಪ್ರವೇಶಿದ ಮೊದಲ ದಿನವೇ ಪ್ರಭುಗಳು ನಮ್ಮ ಹೃದಯಾಂತರಾಳದೊಳಗಿನ ನೋವನ್ನು ಕಂಡ ಹಿಡಿದರು. ಹಾಗು ನಮ್ಮನ್ನು ಸಾಂತ್ವನಗೊಳಿಸಲೋಸುಗ.

"ಕಿರಿಯರಾಣಿ! ನಿಮ್ಮ ಮುಖವನ್ನು ನೋಡಿದರೆ ನೀವು ಭಗ್ನ ಪ್ರೇಮಿಗಳೆಂಬುದು ವ್ಯಕ್ತವಾಗುತ್ತದೆ. ನೀವು ದಯವಿಟ್ಟು ಈ ವಿಷಯಲ್ಲಿ ಸುಳ್ಳಾಡಕೂಡದು. ಇದ್ದುದನ್ನು ಇದ್ದಂತೆ ಹೇಳಿ!" ಎಂದರು.

ಆಗ ಪ್ರಭುಗಳಿಗೆ ಏನೆಂದು ಉತ್ತರವೀಯಬೇಕೆಂಬುದೇ ನಮಗೆ ತಿಳಿಯಲಿಲ್ಲ. ಇಷ್ಟೇ ಅಲ್ಲ. ನಿನ್ನನ್ನು ಬಿಟ್ಟು ಪ್ರಭುಗಳ ಕೈಹಿಡಿದಿದ್ದುದು ನಮ್ಮ ಮನಸ್ಸಿಗೂ ಆಘಾತವನ್ನುಂಟು ಮಾಡಿತ್ತು- ಆಗ ನಾವು ತುಟಿ ಅಲುಗಾಡಿಸದೆ ಸುಮ್ಮನಿದ್ದು ಬಿಟ್ಟೆವು. ಏಕೆಂದರೆ ನಮಗೆ ಸುಳ್ಳು ಹೇಳುವ ಇಚ್ಛೆ ಇರಲಿಲ್ಲ. ನಿಜವನ್ನು ಹೇಳಿದರೆ ಪ್ರಭುಗಳೆಲ್ಲಿ ಕುಪಿತರಾಗುವರೋ ಎಂಬ ಭಯವಿದ್ದಿತು. ಹೀಗಾಗಿ ನಾವು ಸುಮ್ಮನಾದೆವು. ನಮ್ಮ ಮೌನವು ಪ್ರಭುಗಳಿಗೂ ಅರ್ಥವಾಗಿರಬೇಕು. ಅಂತೆಯೇ ಅವರು—

"ರಾಣಿ! ನಿಮ್ಮ ಮೌನವು ನಮಗೆ ಅರ್ಥವಾಯಿತು. ಸಮಯವು ಮಿಂಚಿ ಹೋದುದಕ್ಕೆ ನಮಗೆ ವಿಷಾದವೆನ್ನಿಸುತ್ತಿದೆ. ಈ ವಿಷಯವು ಮೊದಲೇ ಗೊತ್ತಾಗಿದ್ದರೆ ನಾವು ಅಣ್ಣನವರಿಗೆ ನಮ್ರವಾಗಿ ಸೂಚಿಸಿ ವಿವಾಹದಿಂದ ದೂರವಾಗುತ್ತಿದ್ದೆವು. ಆದರೂ ನಿಮ್ಮ ಹೃದಯದ ವ್ಯಥೆಯನ್ನು ಹೋಗಲಾಡಿಸಲು ನಾವು ಶಕ್ತಿ ಮೀರಿ ಪ್ರಯತ್ನಿಸುತ್ತೇವೆ. ಅದಕ್ಕಾಗಿ ತಾವು........

ಎಂದು ಪ್ರಭುಗಳು ನುಡಿಯುತ್ತಿರುವಂತೆಯೇ ನಾವು ಅವರ ಪಾದಗಳ ಮೇಲೆ ಬಿದ್ದು ಬಿಟ್ಟೆವು. ಆಗ ಅವರು ನಮ್ಮನ್ನು ಮೇಲಕ್ಕೆತ್ತಿ ಅನುರಾಗ ಪೂರ್ಣ ದೃಷ್ಟಿಯಿಂದ ನಮ್ಮನ್ನು ನೋಡುತ್ತ—

" ಕಿರಿ ರಾಣಿಯರು ಹಾಗೆಲ್ಲ ಮಾಡಬಾರದು. ನಿಮ್ಮ ಬಗ್ಗೆ ನಮಗೆ ಹೆಮ್ಮೆಯಿದೆ. ವಿದೇಶೀಯರಾದ ಶಕರು ಭಾರತೀಯರನ್ನು ಪಶುಗಳಂತೆ ಕಾಣುತ್ತಿದ್ದರು. ಇಲ್ಲಿಯ ಅರಸರು ನಿರ್ವೀರ್ಯರೆಂದು ಹಳಿದು ಅವರ ಬೇಟೆ ಯಾಡುತ್ತಿದ್ದರು. ಆದರೆ ಅಣ್ಣನವರೆದುರು ಮಾತ್ರ ಶಕರ ಆಟ ಸಾಗಲಿಲ್ಲ. ಪ್ರತಿಯೊಂದು ಯುದ್ಧದಲ್ಲಿಯೂ ಅವರು ಶಕರನ್ನು ಪಾತಾಳಕ್ಕೆ ತುಳಿದರು. ಭಾರತೀಯರಲ್ಲಿಯೂ ಶಕ್ತಿ ಶೌರ್ಯಗಳಿವೆ; ಎಂಬುದನ್ನು ತೋರಿಸಿಕೊಟ್ಟರು. ಆದರೂ ನಿರಂತರ ಹೋರಾಟವು ಅವರಿಗೂ ಬೇಸರಿಕೆಯನ್ನುಂಟು ಮಾಡಿತ್ತು. ಆದಕ್ಕಾಗಿಯೇ ಅವರಲ್ಲಿ ಶಕರೊಂದಿಗೆ ರಕ್ತ ಸಂಬಂಧವನ್ನು ಬೆಳೆಸುವ ಇಚ್ಛೆಯುಂಟಾಯಿತು. ನಿಮ್ಮ ಸೌಂದರ್ಯದ ಖ್ಯಾತಿಯನ್ನು ಅಣ್ಣನವರೂ ಕೇಳಿದ್ದರು. ಆದಕ್ಕಾಗಿ ಒಂದು ದಿನ ಅವರು ನಮ್ಮೆದುರು—

"ಭರ್ತೃಹರಿ! ಶಕಕನ್ಯೆ ಪಿಂಗಳೆಯ ಬಗ್ಗೆ ನಿನಗೆ ಗೊತ್ತಿದೆಯಷ್ಟೆ! ಆ ಕನ್ಯೆಯ ಕೈಹಿಡಿಯಲು ನೀನು ಮುಂದಾಗಬೇಕು" ಎಂದರು.

"ಪ್ರಭುಗಳ ಚಿತ್ತ!" ಎಂದು ನಾವು ಉತ್ತರಿಸಿದೆವು.

"ನಮ್ಮ ಮಾತಿಗೆ ಎದುರುತ್ತರವೀಯುವದಿಲ್ಲವೆಂಬುದು ನಮಗೆ ಗೊತ್ತಿದ್ದಿತು- ರಸಿಕ ಹೃದಯದ ತರುಣ ಕವಿಯಾದ ನೀನು ಪಿಂಗಳೆಯೊಂದಿಗೆ ಸರಿಯಾಗಿ ನಡೆದು ಕೊಳ್ಳುವಿಯೆಂಬುದೂ ನಮಗೆ ಗೊತ್ತಿದೆ" ಎಂದರು.

"ತಮ್ಮ ಮಾತಿನ ಅರ್ಥವಾಗಲಿಲ್ಲ!"

"ಅರ್ಥವಾಗದಂತಹದೇನೂ ಇಲ್ಲ- ಶಕರು ನಮಗೆ ವೈರಿಗಳು. ಅಂಥವರ ಕನ್ಯೆಯನ್ನು ನಿನಗಾಗಿ ನಾವು ನಿರ್ಧರಿಸಿದ್ದೇವೆ. ಶತ್ರು ಕನ್ಯೆಯ ಕೈಹಿಡಿದಾಗ ಮನದೊಳಗೆ ನಾನಾ ಬಗೆಯ ತಾಕಲಾಟಗಳು ನಡೆಯುವದು ಸ್ವಾಭಾವಿಕವೇ ಆಗಿದೆ. ಶಕರ ಮೇಲಿನ ಅಸಮಾಧಾನವನ್ನು ನಮ್ಮ ಪ್ರಾಸಾದದ ಹೊಸ್ತಿಲು ಮೆಟ್ಟುವ ಕನ್ಯೆಯ ಮೇಲೆ ತೋರಿಸಬಾರದು ಎಂದೆವು ಅಷ್ಟೆ."

"ಚಕ್ರವರ್ತಿಗಳು ಭರ್ತೃಹರಿಯನ್ನು ತಪ್ಪಾಗಿ ಭಾವಿಸಿಕೊಂಡಂತಿದೆ. ವೈರಿಯನ್ನು ಪ್ರೇಮದಿಂದ ಗೆಲ್ಲಬೇಕಲ್ಲದೆ ಖಡ್ಗದಿಂದಲ್ಲ. ಖಡ್ಗದಿಂದ ದೊರೆತ

ವಿಜಯವು ನಿಜವಾದ ವಿಜಯವಲ್ಲ. ಏಕೆಂದರೆ ಯುದ್ಧದಲ್ಲಿ ಯಾವಾಗಲೂ ಜಯವೇ ದೊರೆಯುತ್ತದೆಂದು ಯಾರೂ ಎದೆತಟ್ಟಿ ಹೇಳುವದು ಸಾಧ್ಯವಿಲ್ಲ. ಒಂದು ಸಲ ಒಬ್ಬನ ಕೈ ಮೇಲಾದರೆ ಇನ್ನೊಂದು ಸಲ ಮತ್ತೊಬ್ಬರ ಕೈ ಮೇಲಾಗುವದು. ಆದರೆ ಪ್ರೇಮದಿಂದ ಗಳಿಸಿದಂಥ ವಿಜಯವು ಶಾಶ್ವತ ವಿಜಯವಾಗುವದು. ಆದರೆದುರು ಖಡ್ಗಗಳು ಏನೂ ಮಾಡಲಾರವು. ಕೂರಂಬುಗಳು ಮಾಡದ ಕಾರ್ಯವನ್ನು ಎರಡು ಅನುರಾಗ ಪೂರ್ಣ ಹೃದಯಗಳು ಮಾಡಬಲ್ಲವು. ಹೀಗೆ ಹೇಳುತ್ತಿರುವೆನೆಂದು ನಾನು ಯುದ್ಧಕ್ಕಂಜುವೆನೆಂದು ತಾವು ಸರ್ವಥಾ ಭಾವಿಸಕೂಡದು. ಯುದ್ಧ ರಂಗದಲ್ಲಿ ನಿಂತಾಗ ನನಗೆ ಗೆಲ್ಲುವದೊಂದನ್ನು ಬಿಟ್ಟರೆ ವೀರ ಸ್ವರ್ಗ ಪಡೆಯುವದೊಂದೇ ಗೊತ್ತಿದೆಯೆಂಬುದು ತಮಗೂ ಅರಿಯದ ವಿಷಯವಲ್ಲ. ಅಲ್ಲದೆ ಇನ್ನೂ ಒಂದು ಮಾತು. ಶಕರು ದುಷ್ಟರು, ನೀಚರು ನಿಜ. ಆದರೆ ಎಲ್ಲರೂ ಯಾವಾಗಲೂ ಒಂದೇ ತೆರನಾಗಿರುವದಿಲ್ಲವೆಂಬುದನ್ನೂ ನಾವು ಮರೆಯಬಾರದು. ಚಕ್ರವರ್ತಿಗಳೆದುರು ಈ ವರೆಗೆ ಮಾತನಾಡಿದ್ದರಲ್ಲಿ ಏನಾದರೂ ಉದ್ಧಟತನದ ಮಾತುಗಳಿದ್ದರೆ ದಯವಿಟ್ಟು ಕ್ಷಮಿಸಬೇಕು." ಎಂದು ಕೇಳಿಕೊಂಡೆವು. ಆಗ ಅವರು—

"ಭರ್ತೃಹರಿ! ನಿನ್ನ ಬಾಯಿಂದ ಉತ್ಪ್ರೇಕ್ಷೆಯ ಶಬ್ದಗಳು ಬರಲಾರವೆಂಬುದು ನಮಗೆ ಗೊತ್ತಿದೆ. ನಿನ್ನಂಥ ವೀರಾಧಿವೀರನೂ, ಬಹುಮುಖ ಪ್ರತಿಭೆಯ ವಿದ್ವಾಂಸನೂ ಆದ ಸೋದರನನ್ನು ಪಡೆದ ನಾವು ನಿಜಕ್ಕೂ ಧನ್ಯರು. ಆಯಿತು ಒಂದು ಸಲ ಶಕರೊಂದಿಗೆ ರಕ್ತ ಸಂಬಂಧವನ್ನು ಬೆಳೆಯಿಸಿದೆವೆಂದರೆ ಮುಂದೆ ಕತ್ತಿ ಎತ್ತುವ ಸಮಯ ಬರಲಿಕ್ಕಿಲ್ಲವೆಂದು ನನು ಭಾವನೆಯಾಗಿದೆ. ನಮ್ಮ ಭಾವನೆಗೆ ಆಘಾತವುಂಟಾಗದಿರಲಿ ಎಂದು ಮಹಾಕಾಲೇಶ್ವರನಲ್ಲಿ ಪ್ರಾರ್ಥಿಸುತ್ತೇವೆ" ಎಂದು ನುಡಿದಿದ್ದಳು.

"ರಾಣೀ! ನಾವು ಶಕರ ವಿರೋಧಿಗಳೂ ಅಲ್ಲ. ಪ್ರೇಮದ ವಿರೋಧಿಗಳೂ ಅಲ್ಲ. ನಮ್ಮಿರ್ವರ ಮಿಳನವು ಎರಡು ಜನಾಂಗಗಳನ್ನು ಎಂದೆಂದಿಗೂ ಬೇರ್ಪಡಿಸಲಾರದಂತಹ ಬೆಸುಗೆಯಾಗಲಿ. ಆ ಬೆಸುಗೆಯು ಸಡಿಲಾಗದಂತೆ

ನಾವು ನಮ್ಮ ಜೀವನದ ಕೊನೆಯುಸಿರಿನ ವರೆಗೆ ಪ್ರಯತ್ನಿಸೋಣ" ಎಂದರು.

ಪ್ರಭುಗಳ ಮಾತುಗಳನ್ನು ಕೇಳಿ ಅಮೃತ ಸವಿದಷ್ಟು ಆನಂದವಾಯಿತು. ಆಗ ನಾವು.—

"ಪ್ರಭುಗಳಿಗೆ, ಶಕರ ಮೇಲೆ ಎಳ್ಳಷ್ಟೂ ದ್ವೇಷವಿಲ್ಲವೆ?" ಎಂದು ಪ್ರಶ್ನಿಸಿದೆವು.

"ನಮ್ಮ ಹೃದಯದಲ್ಲಿ ದ್ವೇಷಕ್ಕೆ ಸ್ಥಾನವಿಲ್ಲ ದೇವಿ! ದ್ವೇಷಕ್ಕೆ ಅಂತವೆಂಬುದು ಇಲ್ಲವೆ ಇಲ್ಲ. ಅದು ಕಡಿಮೆಯಾಗಬೇಕಾದರೆ ಒಂದೇ ಒಂದು ಉಪಾಯವಿದೆ. ಅದುವೇ ಉಪೇಕ್ಷೆ. ದ್ವೇಷವನ್ನು ನಿರ್ಲಕ್ಷಿಸಿ ಬಿಟ್ಟರಾಯಿತು; ಅದು ತಂತಾನೆ ನಿರ್ಮೂಲವಾಗುವದು. ಇನ್ನು ಶಕರ ವಿಷಯ. ಹಿಂದಿನ ತಲೆ ಮಾರಿನವರಿಗೆ ಶಕರು ಭಾರತ ವರ್ಷದ ಜನರಿಗೆ ಪರಕೀಯರಾಗಿದ್ದರು. ನಿಜ. ಆದರೆ ಇಂದು ಶಕರು ಕೂಡ ಭಾರತಿಯರೇ ಆಗಿದ್ದಾರೆ. ಅಂದಾಗ ನಮ್ಮ ನಮ್ಮೊಳಗೆ ವೃಥಾ ಕಲಹ ಬೆಳೆಯಿಸಿಕೊಂಡು ಹೋಗುವದರಲ್ಲಿ ಏನರ್ಥವಿದೆ ? ಅಲ್ಲದೆ ಮಾನವ ಪ್ರೇಮಿಗಳಾದ ನಾವು ವೈರವನ್ನು ಮುಂದುವರಿಸುವದು ಸಾಧ್ಯವೇ ಇಲ್ಲ. ಪ್ರೇಮದಿಂದ ಎಂಥ ಕೆಲಸವನ್ನೂ ಸಾಧಿಸಿಕೊಳ್ಳುವದು ಸಾಧ್ಯವಿದೆ. ಎಂಬುದನ್ನು ಕಂಡು ಕೊಂಡ ನಾವು ಖಡ್ಗಕ್ಕೆ ಅಷ್ಟೊಂದು ಬೆಲೆಯನ್ನು ಕೊಡುವದೇ ಇಲ್ಲ.

"ಇನ್ನೊಂದು ಮಾತು ಪ್ರಿಯತಮೆ ! ನಮ್ಮಿಂದ ನಿಮಗೆ ಎಂದಿಗೂ ತೊಂದರೆಯಾಗುವದಿಲ್ಲ. ನಾವೀರ್ವರೂ ಎರಡು ಜನಾಂಗಗಳನ್ನು ಒಂದೆಡೆ ಸೇರಿಸುವಂಥ; ಪರಸ್ಪರರಲ್ಲಿ ಪ್ರೇಮಾನುರಾಗಗಳನ್ನು ಬೆಳೆಯಿಸುವಂಥ ಕೊಂಡಿಗಳಾಗಿದ್ದೇವೆ. ಈ ಮಾತನ್ನು ನಾವೀರ್ವರೂ ಮರೆಯಬಾರದು. ನಮ್ಮ ಮಾತಿನ ಅರ್ಥವು ನಿಮಗಾಗಿರಬೇಕೆಂದೇ ಭಾವಿಸುತ್ತೇವೆ. ಅದು ಹೋಗಲಿ, ಅಶ್ವಪರೀಕ್ಷಕನ ವಿಷಯನ್ನು ಹೇಳ ಹೊರಟ ನಾವು ಏನನ್ನೋ ಹೇಳತೊಡಗಿದೆವು. ಅಂದ ಹಾಗೆ ಇಂದು ಒಡ್ಡೋಲಗಕ್ಕೆ ಬಂದ ಅಶ್ವಪರೀ

ಕ್ಷಕನು ಬುದ್ಧಿವಂತನೆಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ ಆದರೆ ಅವನು ಕೇವಲ ಅಶ್ವಪರೀಕ್ಷಕನಾಗಿರದೆ ಯಾವುದೋ ಅರಸು ಮನೆತನದವನಿರಬೇಕೆಂದು ನಮಗನ್ನಿಸುತ್ತದೆ." ಎಂದರು ಆಗ ನಾವು—

"ಪ್ರಭುಗಳು ಅದು ಹೇಗೆ ಕಂಡು ಹಿಡಿದಿರಿ ?" ಎಂದು ಕೇಳಲು; ಅವರು—

"ರಾಣಿ ! ಮನುಷ್ಯರು ಯಾರು ಹೇಗೆ ಎಂಬುದನ್ನು ಕಂಡು ಹಿಡಿಯುವದು ಅಷ್ಟೇನೂ ತೊಂದರೆಯ ವಿಷಯವಲ್ಲ. ಆ ಯುವಕನು ಇಂದು ಒಡ್ಡೋಲಗಕ್ಕೆ ಬಂದು ತಾನು ಅಶ್ವಪರೀಕ್ಷಕನೆಂದೂ ತನಗೆ ಆಶ್ರಯ ಬೇಕೆಂದೂ ಬೇಡಿದನು. ಅದಕ್ಕೆ ನಾವು ಅವನಲ್ಲಿಯ ವಿದ್ಯೆಯನ್ನು ಪರೀಕ್ಷಿಸಲೋಸುಗ ಲಾಯದೊಳಗಿನದೊಂದು ಕುದುರೆಯನ್ನು ತರಿಸಿ ಅವನೆದುರು ನಿಲ್ಲಿಸಿದೆವು. ಆಗ ಅವನು ನೋಡ-ನೋಡುತ್ತಿರುವಂತೆ ಚಟಕ್ಕನೆ ಕುದುರೆಯ ಮೇಲೆ ಹತ್ತಿ ಕುಳಿತನು. ಆಗ ನಾವು "ಈ ತರುಣನು ಸಾಮಾನ್ಯನಲ್ಲ. ಯಾವುದೋ ದೊಡ್ಡ ಮನೆತನದವನಿರಬೇಕೆಂದು ತರ್ಕಿಸಿದೆವು." ಎಂದರು.

"ಕೇವಲ ಕುದುರೆಯ ಮೇಲೆ ಹತ್ತಿ ಕುಳಿತುಕೊಂಡಿದ್ದಕ್ಕೆ ತಾವು ಹಾಗೆ ಭಾವಿಸಿದರಾ ? "

"ಹೌದು ರಾಣಿ! ಅದೊಂದೇ ಕ್ರಿಯೆಯಿಂದ ನಾವು ಅರಿತುಕೊಂಡೆವು."

"ಪ್ರಭುಗಳ ಮಾತಿನ ಅರ್ಥ ನಮಗಾಗಲಿಲ್ಲ. ದಯವಿಟ್ಟು ಬಿಡಿಸಿ ಹೇಳಬೇಕು. ಕಾರ್ಯಬಾಹುಳ್ಯವಿದ್ದರೆ ಬೇಡ. ಏನೋ ಉತ್ಸುಕತೆಯಿಂದ ಕೇಳುತ್ತಿದ್ದೇವೆ. ಅಷ್ಟೆ !"

"ಹೇಳುವದಕ್ಕೆ ಅಡ್ಡಿ ಏನಿದೆ? ಈಗ ನಮಗೂ ವಿಶ್ರಾಂತಿಯ ಸಮಯ. ನಿಮ್ಮ ಉತ್ಸುಕತೆಯನ್ನು ಭಂಗಗೊಳಿಸುವದು ನಮ್ಮಿಂದ ಎಂದಿಗಾದರೂ ಸಾಧ್ಯವಿದೆಯೆ?" ಎಂದು ನುಡಿದ ಪ್ರಭುಗಳು:

"ಮಹಾರಾಣಿ ! ಆ ಯುವಕನು ನಿಜವಾದ ಅಶ್ವಪರೀಕ್ಷಕನಾಗಿದ್ದರೆ

ಕುದುರೆಯು ಅಪನೆದುರು ನಿಂತುಕೊಳ್ಳುತ್ತಲೆ ಅದರ ಸುಳಿಗಳನ್ನು, ಕಾಲು ಗಳನ್ನು ಪರೀಕ್ಷಿಸುತ್ತಿದ್ದ. ಆದರೆ ಅದಾವುದನ್ನೂ ಮಾಡದೆ ಒಮ್ಮೆಲೇ ಕುದುರೆಯ ಮೇಲೆ ಕುಳಿತುಕೊಂಡಿದ್ದರಿಂದ, ಈ ತರುಣನು ಅಶ್ವಪರೀಕ್ಷಕ ನಾಗಿರ ಒಕ್ಕಿಯ ಮನೆತನದಲ್ಲಿ ಸುಖದಿಂದ ಬೆಳೆದವನು, ಹಿಂದೆ-ಮುಂದೆ ವಿಚಾರ ಮಾಡದೆ ಕಾರ್ಯಪ್ರವೃತ್ತನಾಗತಕ್ಕವನು ಎಂದುಕೊಂಡೆವು. ಅನಂತರ ನಿನ್ನ ನಿಲುವಿಕೆ, ಮುಖಚರ್ಯೆಯ ಬಗೆಗೆ ವಿವರಿಸಿದರು. ಆಗ ನಮ್ಮ ಎದೆಯು ಒಂದೇ ಸವನೆ ಹೊಡೆದುಕೊಳ್ಳತೊಡಗಿತು. ಏಕೆಂದರೆ ಪ್ರಭುಗಳ ಹೇಳಿಕೆಯ ಮೇಲಿಂದ ಅಶ್ವ ಪರೀಕ್ಷಕನಾಗಿ ಬಂದವನು ನೀನೇ ಎಂಬುದು ನಮಗೆ ಖಚಿತವಾಗಿ ಬಿಟ್ಟಿತು. ಮುಂದೇನು ಮಾಡಬೇಕು ಎಂಬ ಆ ಆಲೋಚನೆಯೊಳಗೆ ಸಿಲುಕಿ ಬಿಟ್ಟೆವು. ಮುಖದ ಮೇಲಿನ ಉತ್ಸಾಹದ ಕಳೆಯು ಇಲ್ಲವಾಯಿತು. ಅದು ಪ್ರಭುಗಳ ಗಮನಕೂ ಬಂದಿತು ಆಗ ಅವರು—

"ರಾಣಿ ಇದೇನು ? ಒಮ್ಮಿಂದೊಮ್ಮೆಲೆ ಮುಖದ ಮೇಲಿನ ಕಳೆಯೇ ಮಾಯವಾಗಿ ಹೋಯಿತಲ್ಲ? ಅಂಥದೇನಾಯಿತು ?" ಎಂದು ಪ್ರಶ್ನಿಸಿದರು.

ಆಗ ಅವರಿಗೆ ಏನೆಂದು ಉತ್ತರ ನೀಯಬೇಕೆಂಬುದು ನಮಗೆ ಬೇಗ ಹೊಳೆಯಲೇ ಇಲ್ಲ. ಆದರೆ ಹೃದಯದೊಳಗಿನ ವಿಷಯವನ್ನು ಅವರಿಗೆ ತಿಳಿ ಸದೆ ಬಿಡುವಂತೆಯೂ ಇರಲಿಲ್ಲ. ಕೊನೆಗೆ ಎಲ್ಲವನ್ನೂ ಅವರಿಗೆ ತಿಳಿಸಿ ಹೃದಯದ ಭಾರವನ್ನು ಕಡಿಮೆ ಮಾಡಿಕೊಳ್ಳಬೇಕು. ಮುಂದೆ ಏನಾದರೂ ಆಗಲೊಲ್ಲದೇಕೆ, ಎರ್ಧರಿಸಿಕೊಂಡು—

"ಪ್ರಭುಗಳು ಅನ್ಯಥಾ ಭಾವಿಸಿಕೊಳ್ಳದಿದ್ದರೆ ಒಂದು ವಿಷಯವನ್ನು ಅರಿಕೆ ಮಾಡಿಕೊಳ್ಳಬೇಕೆಂದಿದ್ದೇವೆ." ಎಂದೆವು.

"ನಮ್ಮಲ್ಲಿ ನಿಮಗೆ ನಂಬುಗೆಯಿಲ್ಲವೆ ?"

"ಪ್ರಭುಗಳಲ್ಲಿ ನಂಬುಗೆಯಿಲ್ಲವೆಂದರೆ ನಾವು ನರಕಕ್ಕೆ ಹೋದೇವು."

"ಹಾಗಿದ್ದರೆ ಈ ಪೀಡಿಕೆಯಾತಕ್ಕೆ ? ಹೇಳಬೇಕಾದುದನ್ನು ಸರಳ

ವಾಗಿ ನಿಃಸಂಕೋಚವಾಗಿ ಹೇಳಬಹುದು ನೀವು ಕೇಳುವ ವಿಷಯವು, ಎಂಥದೇ ಆಗಿದ್ದರೂ ನಾವು ಕುಪಿತರಾಗುವದಿಲ್ಲ."

"ದೊಡ್ಡ ಮನಸ್ಸಿನ ಪ್ರಭುಗಳು ಅಷ್ಟು ಹೇಳಿ ದೀನಳ ಹೃದಯದ ಭಾರವನ್ನು ಕಡಿಮೆ ಮಾಡಿದಿರಿ."

"ರಾಣಿ! ನಿಮ್ಮ ಹೃದಯದ ಮೇಲೆ ಅದೆಂಥ ಭಾರ ಬಿದ್ದಿದೆ? ಅದು ಏಕೆ ಬಿದ್ದಿದೆ ಯೆಂಬುದಂತೂ ನಮಗೆ ಗೊತ್ತಿಲ್ಲ. ಆದರೂ ಅದನ್ನು ಕಡಿಮೆ ಮಾಡಲು ನಾವು ಶಕ್ತಿಮೀರಿ ಪ್ರಯತ್ನಿಸುತ್ತೇವೆ. ಈಗಲಾದರೂ ಹೇಳಬಹುದಲ್ಲ!"

"ಹೇಳುತ್ತೇವೆ ಪ್ರಭು! ಇದೀಗ ತಾವು ಅಶ್ವ ಪರೀಕ್ಷನ ಬಗೆಗೆ ಅಪ್ಪಣೆ ಕೊಡಿಸಿದಿರಿ. ಆ ಬಗ್ಗೆಯೇ ನಮಗೂ ಒಂದೆರಡು ವಿಷಯಗಳನ್ನು ಅರಿತು ಕೊಳ್ಳ ಬೇಕಾಗಿತ್ತು."

"ಅವನ ಬಗ್ಗೆ ರಾಣಿಯವರೇನು ತಿಳಿದುಕೊಳ್ಳ ಬೇಕಾಗಿತ್ತು?"

"ಆ, ಅಶ್ವಪರೀಕ್ಷನ ಹೆಸರನ್ನು ತಾವು ಕೇಳಿದಿರಾ?"

ಎಂದು ನಾವು ತೊದಲುತ್ತಲೇ ಪ್ರಭುಗಳನ್ನು ಕೇಳಿದೆವು. ಆಗ ಅವರು—

"ಇಷ್ಟು ಮಾತಿಗಾಗಿ ರಾಣಿಯವರು ಇಷ್ಟೊಂದು ಬಳಲಬೇಕಾಯಿತೆ? ಆ ಅಶ್ವಪರೀಕ್ಷನ ಹೆಸರು ರಾಹುಲ!"

ಪ್ರಭುಗಳ ಬಾಯಿಂದ ರಾಹುಲ ಎಂಬ ಶಬ್ದವು ಹೊರಬೀಳುತ್ತಲೇ ನಮಗೆ ಸಿಡಿಲು ಬಡಿದಂತಾಯಿತು. ಪ್ರಭುಗಳು ಎದುರಿಗಿರುವರೆಂಬುದೂ ನಮ್ಮ ಜ್ಞಾಪಕದಲ್ಲುಳಿಯಲಿಲ್ಲ. ಅದನ್ನು ಗುರುತಿಸಿದ ಪ್ರಭುಗಳು—

"ರಾಣಿಯವರಿಗೆ ಇಂದು ಮೈಯಲ್ಲಿ ಸ್ವಾಸ್ಥ್ಯವಿಲ್ಲನೆಂದು ಕಾಣಿಸುತ್ತದೆ. ಇಂದು ನೀವು ವಿಶ್ರಾಂತಿ ಪಡೆಯಿರಿ. ನಮಗೂ ಬೇರೆ ಯಾವುದೋ ಒಂದು ಕಾರ್ಯದ ನೆನಪಾಯಿತು. ಅಲ್ಲಿಗೆ ಹೋಗುತ್ತೇವೆ." ಎಂದರು.

ಪ್ರಭುಗಳು ಹಾಗೆ ನುಡಿದಾಗಲೇ ನನ್ನ ಅಂತರಂಗದೊಳಗಿನ ದ್ವಂದ್ವವು ಅವರಿಗೆ ತಿಳಿದಿರಬೇಕೆಂದು ನನಗೆನ್ನಿಸಿತು. ಇನ್ನು ಮುಚ್ಚು ಮರೆ ಯೋಗ್ಯವಲ್ಲವೆಂದು ನಿರ್ಧರಿಸಿಕೊಂಡು :

"ಪ್ರಭುಗಳಿಗೆ ನಿಜಕ್ಕೂ ಅಷ್ಟೊಂದು ಕಾರ್ಯ ಬಾಹುಳ್ಯ ವಿದ್ದ ಹಾವರೆ ನಮ್ಮದೊಂದು ಮಾತನ್ನು ಕೇಳಿ ಹೋಗಬಹುದು." ಎಂದೆವು. ಆಗ ಅವರು—

"ಅದೇನು ?" ಎಂದು ಅತಿ ಉತ್ಸುಕತೆಯಿಂದ ಕೇಳಿದರು. ಆಗ—

"ಇದೀಗ ತಾವು ಅಶ್ವ ಪರೀಕ್ಷನ ಸಿಲುವಿಕೆ, ಮುಖಚರ್ಯೆ ಹಾಗು ಅವನ ಮುಗ್ಧತನದ ವಿಷಯವನ್ನು ಅಪ್ಪಣೆ ಕೊಡಿಸಿದಿರಿ. ಆಗಲೇ ನಮ ಗೊಂದು ಸಂದೇಹವು ಬಂದಿತು. ಅವನ ಹೆಸರನ್ನು ಕೇಳಿದಾಗಲಂತೂ ಅದು ಇನ್ನಷ್ಟು ನಿಶ್ಚಯವಾಯಿತು. ಅವನೂ ಅರಸು ಕುಮಾರ ಮೊದಲು ಅವನೊಂದಿಗೇ ನಮ್ಮ ವಿವಾಹವು ನಿಶ್ಚಯವಾಗಿದ್ದಿತು. ಅನಂತರ ಚಕ್ರ ವರ್ತಿಗಳೊಂದಿಗೆ ನಡೆದ ಯುದ್ಧದಲ್ಲಿ ನಮ್ಮ ತಂದೆಯವರು ಸೋತರು. ಆಗ ಚಕ್ರವರ್ತಿಗಳು ತಮಗಾಗಿ ನಮ್ಮನ್ನು ತಂದೆಯವರಿಂದ ಪಡೆದುಕೊಂ ಡರು. ನಮ್ಮ ವಿಚಾರಗಳೂ ತಮ್ಮ ಹಾಗೆಯೇ ಇದ್ದವು. ಅಂತೆಯೇ ವಿವಾ ಹಕ್ಕೆ ಒಪ್ಪಿಗೆಯನ್ನಿತ್ತೆವು. ಅಂದರೆ ನಮ್ಮ ಸ್ವಾರ್ಥ ತ್ಯಾಗದಿಂದ ಎರಡು ಜನಾಂಗಗಳಲ್ಲಿಯ ಅಕಾರಣ ಶತೃತ್ವವು, ವಿನಾಕಾರಣದ ರಕ್ತಪಾತವು ನಿಂತು ಹೋಗುತ್ತದೆಯೆಂದರೆ ನಮ್ಮಂತಹ ಪುಣ್ಯವಂತರೇ ಯಾರೂ ಇಲ್ಲ ವೆಂದು ಭಾವಿಸಿಕೊಂಡೆವು. ಹಾಗು ರಾಹುಲನನ್ನು ಅಂತಃಪುರಕ್ಕೆ ಕರೆಯಿಸಿ ಕೊಂಡು ಸ್ವಸಂತೋಷದಿಂದ ಮದುವೆಗೆ ಸಿದ್ಧರಾದುದನ್ನು ತಿಳಿಸಿದೆವು...."

"ಆ ಮಾತಿಗೆ ರಾಹುಲ ಏನೆಂದು ಉತ್ತರಿಸಿದ?' ಪ್ರಭುಗಳು ಮಧ್ಯ ದಲ್ಲಿಯೇ ಪ್ರಶ್ನಿಸಿದರು.

"ಅವನು ಹೆಚ್ಚಿಗೇನನ್ನೂ ಹೇಳಲಿಲ್ಲ. ನಿಮ್ಮ ದಾಂಪತ್ಯ ಜೀವನವು ಸರಿಯಾಗಿ ನಡೆಯಲಿ. ಶಕಕನ್ಯೆಯೋರ್ವಳು ಭಾರತೀಯನನ್ನು ವರಿಸುವದ ರಿಂದ ಪರಸ್ಪರರಲ್ಲಿಯ ವೈಮನಸ್ಸು ಇಲ್ಲವಾಗುತ್ತದೆಂದರೆ ಇದಕ್ಕೂ ಹೆಚ್ಚಿಗೆ

ನನಗೇನು ಬೇಕು? ನೀವು ಸಮ್ರಾಟ್ ಭರ್ತೃಹರಿಗಳೊಂದಿಗೆ ಸದಾ ಸುಖಿಯಾಗಿರಿ. ನಾನು ದೇವರಲ್ಲಿ ಸದಾ ನಿಮ್ಮಿರ್ವರ ಸುಖಕ್ಕಾಗಿಯೇ ಪ್ರಾರ್ಥಿಸುತ್ತ ದಿನಗಳನ್ನು ಕಳೆಯುತ್ತೇನೆ."

ಎಂದು ನೀನು ಆ ದಿನ ಆಡಿದ ಮಾತುಗಳನ್ನೆಲ್ಲ ಪ್ರಭುಗಳೆದುರು ವಿವರಿಸಿದೆ. ಹೃದಯದೊಳಗೆ ಏನೊಂದನ್ನೂ ಇರಿಸಿಕೊಳ್ಳದೆ ಎಲ್ಲವನ್ನೂ ಹೇಳಿ ಬಿಟ್ಟಿದ್ದಕ್ಕೆ ಅವರಿಗೂ ಆನಂದವಾಗಿರಬೇಕು. ಅಂತೆಯೇ—

"ರಾಣಿ! ನಿಮ್ಮದು ನಿಜಕ್ಕೂ ಸರಳ ಹೃದಯ. ಇದ್ದುದನ್ನು ಇದ್ದಂತೆ ಹೇಳಿ ನಮ್ಮ ಮನವನ್ನು ಹಗುರುಗೊಳಿಸಿದಿರಿ. ಇದಕ್ಕಾಗಿ ನಾವು ನಿಮಗೆ ತುಂಬಾ ಕೃತಜ್ಞರಿದ್ದೇವೆ"ಎಂದರು.

ಅನಂತರ ನಾವು ಅರಸರೆದುರು, ನಿನ್ನನ್ನು ಭೆಟ್ಟಿಯಾಗುವ ಇಚ್ಛೆಯನ್ನು ಪ್ರಕಟಗೊಳಿಸಿದೆವು. ಪ್ರಭುಗಳು ಅದಕ್ಕೂ ಒಪ್ಪಿ ಈ ಸಂದರ್ಭವನ್ನು ಒದಗಿಸಿದರು. ಆಗಲೂ ಅವರು—

"ರಾಹುಲನೊಂದಿಗೆ ಭೆಟ್ಟಿಯಾಗುವ ಕಾರಣವೇನು? ಎಂದು ಕೇಳಲೇ ಇಲ್ಲ. ಅದಕ್ಕೆ ಬದಲಾಗಿ ಭೆಟ್ಟಿಗಾಗಿ ರಾಜೋದ್ಯಾನವೇ ಯೋಗ್ಯವೆಂದು ಸೂಚಿಸಿದರು. ಅದಕ್ಕಾಗಿಯೇ ನಾವು ದಾಸಿಯ ಮುಖಾಂತರ ನಿನಗೆ ಇಲ್ಲಿಗೆ ಬರಲು ಹೇಳಿದ್ದೆವು." ಎಂದು ಪಿಂಗಳೆಯು ನುಡಿದಳು.

ಆ ವರೆಗೆ ಪಿಂಗಳೆಯು ಮಾತುಗಳನ್ನು ಕೇಳುತ್ತ ಚಿತ್ರ ಪ್ರತಿಮೆಯಂತೆ ಕುಳಿತುಕೊಂಡಿದ್ದ ರಾಹುಲನು.—

"ರಾಜಮಾತೆ! ಪ್ರಭುಗಳು ದೇವಾಂಶಸಂಭೂತರೆಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ದೇವರು ಪ್ರಭುಗಳನ್ನೂ, ತಮ್ಮನ್ನೂ ಸಾವಿರ ವರುಷಗಳ ಕಾಲ ಬದುಕಿಸಲಿ. ಇನ್ನು ನಾನು ಬರುತ್ತೇನೆ."

ಎಂದು ನುಡಿದು ಅಲ್ಲಿಂದ ಹೊರಡಲಣಿಯಾದನು. ಆಗ ಪಿಂಗಳೆಯು

“ಅದು ಸರಿ, ರಾಹುಲ! ಆದರೆ ನಾವು ಮೊದಲು ಮಾಡಿದ ಪ್ರಶ್ನೆಗೆ ಉತ್ತರವೇ ದೊರೆಯಲಿಲ್ಲವಲ್ಲ?”

ಹೋಗಲು ಸಿದ್ಧನಾಗಿದ್ದ ರಾಹುಲನು ಅಲ್ಲಿಯೇ ನಿಂತುಕೊಂಡು—

“ರಾಜಮಾತೆಯರು ಕ್ಷಮಿಸಬೇಕು. ನನಗೆ ಈ ಜೀವನದಲ್ಲಿಯೇ ಬೇಸರವುಂಟಾಗಿದೆಯೆಂಬುದನ್ನು ಈ ಹಿಂದೆಯೇ ತಮ್ಮೆದುರು ಉಸುರಿದ್ದು ಜ್ಞಾಪಕವಿರಬಹುದು. ತಾವು ಇಲ್ಲಿಗೆ ಬಂದ ನಂತರ ನನಗೆ ನನ್ನ ರಾಜ್ಯದಲ್ಲಿ ಶಾಂತಿಯೇ ದೊರೆಯಲಿಲ್ಲ. ಒಂದೊಂದು ದಿನಗಳು ಒಂದೊಂದು ಯುಗದಂತೆ ಗೋಚರವಾಗತೊಡಗಿದವು. ಅಲ್ಲದೆ ನಮಗೆ ಶಕರಿಗೆ; ಮೊದಲಿನ ನಮ್ಮ ಹಿರಿಯರಂತೆ ತಲೆ ಎತ್ತಿ ಮೆರೆಯುವದೂ ಸಾಧ್ಯವಿಲ್ಲ. ಏಕೆಂದರೆ ಚಕ್ರವರ್ತಿಗಳಾದ ವಿಕ್ರಮಾದಿತ್ಯರಾಯರು ಭಾರತದೊಳಗಿನ ಶಕರನ್ನೆಲ್ಲ; ನಿರ್ವೀರ್ಯರನ್ನಾಗಿ ಮಾಡಿದ್ದಾರೆ. ಹೀಗಾಗಿ ಅಲ್ಲಿಯ—ನನ್ನ ರಾಜಧಾನಿಯಲ್ಲಿಯ—ಅಸಹ್ಯಕಾರವಾದ ಬಾಳಿಗಿಂತ ಅವಂತಿ ನಗರದಲ್ಲಿದ್ದುಕೊಂಡು ಭರ್ತೃಹರಿ ಪ್ರಭುಗಳಿಗೆ ಒಳ್ಳೆಯದಾಗುವಂಥ ಕಾರ್ಯಗಳನ್ನು ಮಾಡಿಕೊಂಡಿದ್ದರೆ ತನ್ಮೂಲಕ ತಮಗೂ ಒಂದು ಬಗೆಯ ಸೇವೆ ಸಲ್ಲಿಸಿದಂತಾಗುತ್ತದೆ ಎಂದುಕೊಂಡು ಇಲ್ಲಿಗೆ ಬಂದೆನು. ಇಲ್ಲಿಯವರೆಗೆ ಬಂದುದಕ್ಕೂ ನನಗೆ ಯೋಗ್ಯವಾದ ಕೆಲಸವೇ ದೊರೆತಿರುವದು. ಈಗ ನಾನು ಅತಿ ಸಂತೋಷದಿಂದಿದ್ದೇನೆ. ನಿಜ ಹೇಳಬೇಕೆಂದರೆ ನನ್ನ ರಾಜಧಾನಿಗಿಂತಲೂ ಹೆಚ್ಚಿನ ಆನಂದ ಇಲ್ಲಿ ನನಗೆ ದೊರೆಯುತ್ತಿದೆ. ತಮ್ಮ ಬಾಯಿಂದ ಪ್ರಭುಗಳ ವಿಷಯವನ್ನು ಕೇಳಿದಾಗಿನಿಂದಲಂತೂ ನಾನು ಇಲ್ಲಿಗೆ ಬಂದುದು ಯೋಗ್ಯವೇ ಆಯಿತು; ಇಂಥವರ ಸೇವೆಯಲ್ಲಿದ್ದರೆ ಜೀವನವು ಸಾರ್ಥಕವಾಗುವದು; ಎಂದುಕೊಂಡಿದ್ದೇನೆ. ರಾಜಮಾತೆಯವರು ದಯವಿಟ್ಟು ಇದಕ್ಕೂ ಹೆಚ್ಚಿಗೆ ಹೇಳಕೂಡದು.”

ಎಂದು ನುಡಿದು ರಾಹುಲನು ಪಿಂಗಳೆಗೆ ವಂದಿಸಿ ಅಲ್ಲಿಂದ ಹೋಗಿಬಿಟ್ಟನು. ಅವನ ಮಾತುಗಳನ್ನು ಕೇಳಿ ಪಿಂಗಳೆಗೆ ಹೆಮ್ಮೆಯೆನ್ನಿಸಿ ಅವನು ಹೋದ ದಿಶೆಯನ್ನೇ ನೋಡುತ್ತ ಕುಳಿತುಕೊಂಡಳು. ಅದೇ ಸಮಯಕ್ಕೆ ಆ ವರೆಗೂ ಅಲ್ಲಿಯೇ ಮತ್ತೊಂದು ಪುಷ್ಪವಾಟಿಕೆಯಲ್ಲಿ ಕುಳಿತುಕೊಂಡಿದ್ದ ಭರ್ತೃಹರಿಯು ಪಿಂಗಳೆಯ ಬಳಿಬಂದು—

“ದೇವಿ! ರಾಹುಲನು ನಿಜಕ್ಕೂ ವಿಶ್ವಾಸಾರ್ಹತರುಣನಾಗಿದ್ದಾರೆ. ಅಂಥವನ ಸೇವೆಯು ನಮಗೆ ಅವಶ್ಯಬೇಕು ಎಂದನು.

## ೨

ಈ ರೀತಿಯಾಗಿ ಭರ್ತೃಹರಿ ಪ್ರಭುವಿಗೆ ರಾಹುಲನಂಥ ವಿಶ್ವಾಸಾರ್ಹ ವೀರ ಯೋಧರು ಅನಾಯಾಸವಾಗಿ ದೊರೆಯುತ್ತ ಹೋದುದರಿಂದ ಅವನು-ಭರ್ತೃಹರಿಯು—ರಾಜ್ಯದ ಭಾರವನ್ನು ಪ್ರಧಾನಮಂತ್ರಿಗೊಪ್ಪಿಸಿ ತಾನು ಸಾಹಿತ್ಯ ರಚನೆಯಲ್ಲಿಯೇ ಮಗ್ನನಾಗ ತೊಡಗಿವನು. ತತ್ಪರಿಣಾಮವಾಗಿ ಅವನಿಂದ ಶೃಂಗಾರ ಹಾಗೂ ನೀತಿ ಶತಕಗಳು ರಚಿತವಾದವು.

ಆದರೆ ಭರ್ತೃಹರಿಯು ಈ ಮಾರ್ಗವು ಗೋರಕ್ಷನಾಥನಿಗೆ ಸರಿ ಬರಲಿಲ್ಲ. ಅವನ ಮನದಲ್ಲಿ—ಗೋರಕ್ಷನಾಥನ ಮನದಲ್ಲಿ—ಭರ್ತೃಹರಿಯಿಂದ ಇನ್ನೂ ಹೆಚ್ಚಿನ ಸೇವೆಯನ್ನು ಮಾಡಿಸಿಕೊಳ್ಳ ಬೇಕೆಂದಿದ್ದಿತು. ಅಂದರೆ ಅವನಿಗೆ—ಭರ್ತೃಹರಿಗೆ—ಸನ್ಯಾಸಿಯ ದೀಕ್ಷೆಯನ್ನು ಕೊಟ್ಟು ಅವನಿಂದ ವೈರಾಗ್ಯದ ಬಗೆಗೆ ಸಾಹಿತ್ಯವನ್ನು ಸೃಷ್ಟಿಸಬೇಕಾಗಿದ್ದಿತು. ಆ ಬಗ್ಗೆ ಗೋರಕ್ಷನು ಹಗಲಿರುಳೂ ಚಿಂತಿಸುತ್ತಿದ್ದನು.

ಓರ್ವ ಘನ ವಿದ್ವಾಂಸನು ತನ್ನೆಲ್ಲ ಪ್ರತಿಭೆಯನ್ನು ಶೃಂಗಾರ ಹಾಗೂ ನೀತಿಗಳಲ್ಲಿಯೇ ವೆಚ್ಚಮಾಡುವದು ಅವನಿಗೆ ಸರಿ ಬೀಳಲಿಲ್ಲ. ಅವನಿಂದ ವೈರಾಗ್ಯದ ಬಗೆಗೂ ರಚಿಸಲ್ಪಟ್ಟರೆ ಜಗತ್ತಿಗೆ ಎಷ್ಟೊಂದು ಉಪಕಾರವಾದೀತು; ಎಂದು ಯೋಚಿಸಿದನು. ಆದರೆ.......

ಭರ್ತೃಹರಿಯ ಮನವನ್ನು ವೈರಾಗ್ಯದತ್ತ ತಿರುಗಿಸುವದು ಸಣ್ಣ ಮಾತಾಗಿರಲಿಲ್ಲ. ಏಕೆಂದರೆ ಅವನಿಗೆ ಯಾವುದಕ್ಕೂ ಕಡಿಮೆ ಯಾಗಿರಲಿಲ್ಲ. ಪಿಂಗಳೆಯಲ್ಲದೆ ಪಟ್ಟದ ರಾಣಿಯು ಇದ್ದರೂ ಈರ್ವರೂ ಪತಿಯ ಮನೋಭಿಲಾಷೆಯನ್ನರಿತು ಕೊಂಡು ನಡೆಯುವಂಥರಾಗಿದ್ದರು. ಯೋಗ್ಯರಾದ ಪರಿವಾರ ವರ್ಗವಿದ್ದಿತು. ವಿಶ್ವಾಸುಕ ಪ್ರಧಾನಿ ಹಾಗು ದಂಡನಾಯಕರಿದ್ದರು. ಇಷ್ಟೆಲ್ಲ ಇರುವಾಗ ಅವನಿಗೆ ವೈರಾಗ್ಯದ ನೆನಪಾಗುವದೂ ಸಾಧ್ಯವಿರಲಿಲ್ಲ.

ಏಕೆಂದರೆ ವೈರಾಗ್ಯ ಬರುವದು ಎರಡು ರೀತಿಯಿಂದ. ಮೊದಲನೆಯದು ಸಂಸಾರವಲ್ಲಿ ಜುಗುಪ್ಸೆ ಹುಟ್ಟಿದಾಗ; ಎರಡನೆಯದು, ತನಗಿಂತ ಹೆಚ್ಚಿನ ತ್ಯಾಗಿಗಳು ಕಂಡು ಬಂದಾಗ; ಇವೆರಡರಲ್ಲಿಯೂ ಭರ್ತೃಹರಿಯನ್ನು ಮೀರಿಸುವವರು ಯಾರೂ ಇರಲಿಲ್ಲ. ಅಂದರೆ ಅವನಿಗೆ ಸಂಸಾರದಲ್ಲಿ ಜುಗುಪ್ಸೆ ಹುಟ್ಟುವದು ಸಾಧ್ಯವೇ ಇರಲಿಲ್ಲ. ಏಕೆಂದರೆ ಅವನಿಗೆ 'ಪತಿಯ ಇಚ್ಛೆಯನ್ನು ಅರಿತು ನಡೆಯುವಂಥ ಪತ್ನಿಯರು ದೊರೆತಿದ್ದರು." ಅದರಿಂದಾಗಿ ಅವನಿಗೆ ಸಂಸಾರದಲ್ಲಿ ಜುಗುಪ್ಸೆ ಹುಟ್ಟುವದು ಸಾಧ್ಯವೇ ಇರಲಿಲ್ಲ.

ಇನ್ನು ಎರಡನೆಯದು ತ್ಯಾಗದ ವಿಷಯ. ಸ್ವತಃ ಭರ್ತೃಹರಿಯೇ ದೊಡ್ಡ ತ್ಯಾಗಿಯಾಗಿದ್ದನು ಧಾರಾಳತನವು ಅವನಲ್ಲಿ ಮನೆ ಮಾಡಿಕೊಂಡಿದ್ದಿತು. ಹೀಗಾಗಿ ಅವನಿಗಿಂತ ಮಿಗಿಲಾದ ತ್ಯಾಗಿಗಳು ಕಂಡು ಬರುವದು ಕೊಂಚ ದುಸ್ತರದ ಕಾರ್ಯವೇ ಆಗಿದ್ದಿತು. ಈ ವಿಷಯವು ಗೋರಕ್ಷನಾಥನಿಗೂ ತಿಳಿದಿದ್ದಿತು. ಅಂತೆಯೆ ಅವನು ವಿವಂಚನೆಗೊಳಗಾಗಿದ್ದನು. ಕೊನೆಗೊಮ್ಮೆ ಗೋರಕ್ಷನು ಒಂದು ನಿರ್ಧರಕ್ಕೆ ಬಂದು—

"ಸರಿ! ಹೀಗೆಯೇ ಮಾಡಕಕ್ಕದ್ದು. ಭರ್ತೃಹರಿಯನ್ನು ದಾರಿಗೆ ತರಲು ಇದುವೇ ಯೋಗ್ಯವಾದ ದಾರಿ" ಎಂದುಕೊಂಡು ಅವಂತಿ ನಗರದ ಕಡೆಗೆ ಹೊರಟನು.

ರಾಜ ಚೂಡಾಮಣಿ, ರಾಜ ಕಿರೀಟ ಧುರೀಣ, ಸಕಲ ಧರ್ಮ ಮರ್ಮ ಪಾರಂಗತ, ಅರಿಭಯಂಕರ, ಶಾರದಾಕೃಪಾ ಪೋಷಿತ, ಮಹಾ ರಾಜಾಧಿರಾಜ ಭರ್ತೃಹರಿಯ ಓಡ್ಡೋಲಗವಲ್ಲಿ ಯಾವುದೋ ಒಂದು ವಿಷಯದ ಚರ್ಚೆಯು ನಡೆಯುತ್ತಿದ್ದಿತು. ಪ್ರಭುಗಳ ಜೊತೆಗೆ ಸರದಾರ—ಸಾಮಂತರೂ ಆ ವಿಷಯದಲ್ಲಿ ತಲ್ಲೀನರಾಗಿ ಬಿಟ್ಟಿದ್ದರು. ಸಮಯದ ಕಡೆಗೆ ಯಾರ ಗಮನವೂ ಇರಲಿಲ್ಲ. ಏಕೆಂದರೆ ಸಮಯವು—ವೇಳೆಯು—ಅವರಿಗರಿಯದ ರೀತಿಯಲ್ಲಿ ಸರಿಯತೊಡಗಿದ್ದಿತು. ಅದೇ ಸಮಯಕ್ಕೆ ಒಡ್ಡೋಲಗದ ಮಹಾದ್ವಾರದ ದ್ವಾರಪಾಲಕನುಃ

"ಗೋರಕ್ಷನಾಥರು ದಯಮಾಡಿಸಿರುವರು" ಎಂದುಸುರಿದನು.

ತತ್ಕ್ಷಣವೇ ಒಡ್ಡೋಲಗದಲ್ಲಿ ವಿಚಿತ್ರ ಪರಿವರ್ತನೆಯಾಯಿತು. ಚರ್ಚೆಯಲ್ಲಿ ಮಗ್ನರಾಗಿದ್ದವರೆಲ್ಲರೂ ಜಾಗ್ರತರಾಗಿದ್ದರು. ಸ್ವತಃ ಪ್ರಭುಗಳೂ ಎದ್ದು ನಿಂತರು- ಸಭಿಕರೂ ಪ್ರಭುಗಳಂತೆಯೇ ಎದ್ದು ನಿಂತುಕೊಂಡರು.

ಆರಡಿ ಎತ್ತರದ, ನಿಲುವಿಕೆಗೆ ತಕ್ಕ ಮೈಕಟ್ಟಿನ ಜಟಾಧಾರಿಯಾದ ಗೋರಕ್ಷನಾಥನು 'ಅಲಖ್ ನಿರಂಜನ್' ಎನ್ನುತ್ತ ಒಡ್ಡೋಲಗದ ಒಳಗೆ ಪ್ರವೇಶಿಸಿದನು. ಆಗ ಒಂದು ಸೂಜಿಬಿದ್ದರೂ ಸದ್ದು ಕೇಳಿಬರುವಷ್ಟು ನಿಸ್ತಬ್ಧತೆಯು ಒಡ್ಡೋಲಗವನ್ನಾವರಿಸಿತ್ತು. ಆರು ಮೊಳದ ನಾರುಮಡಿಯು ಅವನ ಅನಾವೃತವಾದ ದೇಹದಲ್ಲಿ ಅರ್ಧವನ್ನೂ ಮುಚ್ಚಲು ಅಸಮರ್ಥವಾಗಿದ್ದಿತು. ಹಣೆಯಂತೆ ರಟ್ಟೆಗಳ ಮೇಲೂ ವಿಭೂತಿಯು ಶೋಭಿಸುತ್ತಿತ್ತು. ಎಣ್ಣೆಕಾಣದ ತಲೆಗೂದಲುಗಳು ಜಡೆಗಟ್ಟಿ ಹೋಗಿದ್ದವು. ಆದರೂ ಅವುಗಳನ್ನು ನೋಡಿದರೆ ಒಂದು ಬಗೆಯ ಗೌರವದ; ಆದರದ ಭಾವನೆಯು ಬರುತ್ತಿದ್ದಿತು. ಇಂಥ ಗೋರಕ್ಷನಾಥನು ಬಲದ ಕೈಯಲ್ಲಿ ಹರಿವಾಣ, ಎಡಗೈಯಲ್ಲಿ ಚಮಟಿಯನ್ನು ಹಿಡಿದುಕೊಂಡು, ಒಂದೊಂದೆ ಹೆಜ್ಜೆಗಳನ್ನು ಇರಿಸುತ್ತ ಗಾಂಭೀರ್ಯದಿಂದ ಮುನ್ನಡೆಯ ತೊಡಗಿದನು.

ಆಗ ಭರ್ತೃಹರಿಯು ಸಿಂಹಾಸನದಿಂದ ಕೆಳಗಿಳಿದು ಹೋಗಿ ಗೋರಕ್ಷನನ್ನು ಎದುಗೊಂಡು ಅವನನ್ನು ಗೌರವದಿಂದ ಕರೆತಂದು ತನ್ನ ಸಿಂಹಾಸನದಲ್ಲಿ ಕುಳ್ಳಿರಿಸಿದನು. ಹಾಗು ಇಂಥ ಪ್ರಸಂಗಗಳಲ್ಲಿ ಕುಳಿತುಕೊಳ್ಳಲೋಸುಗ ಇರಿಸಲಾದ ಪೀಠದಲ್ಲಿ ತಾನು ಕುಳಿತುಕೊಂಡನು. ಆಗ ಒಡ್ಡೋಲಗದೊಳಗಿನ ಇತರರೂ ಕುಳಿತುಕೊಂಡರು.

ಉಭಯ ಕುಶಲೋಪರಿಯ ಸಂಭಾಷಣೆಗಳು ಮುಗಿದ ನಂತರ ಭರ್ತೃಹರಿಯು ಅವಂತಿ ನಗರಕ್ಕೆ ಆಗಮಿಸಿದ ಕಾರಣಗಳನ್ನು ಕೇಳಲು ಗೋರಕ್ಷನಾಥನು ಒಂದು ಕ್ಷಣ ಗಂಭೀರ ಆಲೋಚನೆಯಲ್ಲಿ ಮಗ್ನನಾಗಿ ಅನಂತರ—

" ಭರ್ತೃಹರಿ ! ಮಗು ತಾಯಿಯನ್ನು ಮರೆಯುವದು ಸ್ವಾಭಾವಿಕ. ಆದರೆ ತಾಯಿಯು ತನ್ನ ಮಗುವನ್ನು ಮರೆಯಬಾರದಲ್ಲ ! ನೀನು ನಮ್ಮನ್ನು

ನಮ್ಮನ್ನು ಮರೆತು ಬಿಟ್ಟಿ. ನೀನು ಮರೆತಂತೆ ನಾವು ಮರೆತರೆ ನಡೆಯುತ್ತದೆಯೆ? ಅದಕ್ಕಾಗಿ ನಿನ್ನ ಯೋಗ ಕ್ಷೇಮವನ್ನು ವಿಚಾರಿಸಿಕೊಂಡು ಹೋಗಲು ಕಾನನದಿಂದ ಇಲ್ಲಿಗೆ ಬರಬೇಕಾಯಿತು.” ಎಂದು ! ನುಡಿದನು.

“ತಮ್ಮನ್ನು ಮರೆಯುವದು ಎಂದಿಗಾದರೂ ಸಾಧ್ಯವಿದೆಯೇ? ಮಹಾ ಕಾಲೇಶ್ವರನನ್ನು ನಾವು ಪ್ರತಿದಿನವೂ ಪೂಜಿಸುತ್ತೇವೆ. ನಮ್ಮ ದೃಷ್ಟಿಯಲ್ಲಿ ತಾವು ಹಾಗು ಮಹಾ ಕಾಲೇಶ್ವರರು ಒಂದೇ ಆಗಿರುವಿರಿ. ಅಂದಾಗ ತಮ್ಮನ್ನು ಮರೆಯುವ ಪ್ರಶ್ನೆಯೇ ಬರುವದಿಲ್ಲ.”

“ಭರ್ತೃಹರಿ ! ವಾಗ್ವಾದದಲ್ಲಿ ನಿನ್ನನ್ನು ಗೆಲ್ಲುವದು ಯಾರಿಂದ ಸಾಧ್ಯವಿದೆ? ಅವರೂ ನೀನು ನಮ್ಮ ಮೇಲಿರಿಸಿದ ಭಕ್ತಿಯನ್ನು ಕಂಡು ನಮಗೆ ಅತ್ಯಾನಂದವಾಗಿದೆ. ಅದಕ್ಕಾಗಿಯೇ ನಿನ್ನನ್ನು ಕಾಣಲು, ಆಶೀರ್ವದಿಸಿ ಹೋಗಲು ಇಲ್ಲಿಯವರೆಗೆ ಬಂದಿದ್ದೇವೆ.” ಗೋರಕ್ಷನಾಥನೆಂದ.

“ನಮ್ಮ ಭಾಗ್ಯಕ್ಕೆ ಎಣೆಯೇ ಇಲ್ಲವೆಂದು ಭಾವಿಸುತ್ತೇವೆ. ಏಕೆಂದರೆ ತಮ್ಮಂಥ ಸತ್ಪುರುಷರ ಆಶೀರ್ವಾದವು ಇದ್ದಲ್ಲಿಗೇ ಬರುತ್ತದೆಂದಾಗ ನಾವು ಎಷ್ಟೊಂದು ಭಾಗ್ಯವಂತರಿರಬೇಕು ? ತಮ್ಮ ಆಶೀರ್ವಾದವು ನಮ್ಮ ಮೇಲೆ ಯಾವಾಗಲೂ ಹೀಗೆಯೇ ಇರಲೆಂದು ಮಾಹಾಕಾಲೇಶ್ವರನಲ್ಲಿ ಪ್ರಾರ್ಥಿಸುತ್ತೇವೆ.”

“ನೀನು ಅತಿ ವಿನಯಶಾಲಿಯೆಂಬುದು ನಮಗೆ ಗೊತ್ತಿದೆ ಭರ್ತೃಹರಿ! ಮಹಾ ವಿದ್ವಾಂಸನಾದ ನೀನು ದೈವ ಭಕ್ತನೆಂಬುದೂ ನಮಗೆ ಗೊತ್ತಿದೆ. ಅಲ್ಲದೆ ಸಾಧು—ಸತ್ಪುರುಷರನ್ನು ಅತ್ಯಂತ ಆದರದಿಂದ ಕಾಣುವಿಯೆಂಬುದೂ ನಮಗೆ ಗೊತ್ತಿಲ್ಲದಿಲ್ಲ. ಅದಕ್ಕಾಗಿ ನಾವು ನಿನಗೆ ಕೊಡಲೋಸುಗ ಅಮೂಲ್ಯ ವಸ್ತುವೊಂದನ್ನು ತಂದಿದ್ದೇವೆ.”

“ನಿಜಕ್ಕೂ ಇಂದು ನಮ್ಮ ಜೀವನವು ಪಾವನವಾಯಿತೆಂದು ಭಾವಿಸುತ್ತೇವೆ. ತಾವು ದಯವಿಟ್ಟು ಅನುಗ್ರಹಿಸಲಿರುವದನ್ನು ಪ್ರಸಾದವೆಂದು

ಸ್ವೀಕರಿಸಿ ಜೀವನವನ್ನು ಸಾರ್ಥಕ ಪಡಿಸಿಕೊಳ್ಳುತ್ತೇವೆ. ದಯವಿಟ್ಟು ಅನುಗ್ರಹಿಸಬೇಕು." ಎಂದು ಭರ್ತೃಹರಿಯು ನುಡಿದನು.

"ಭರ್ತೃಹರಿ! ನಿನಗಾಗಿ ನಾವು ಒಂದು ಅಮೂಲ್ಯ ಫಲವನ್ನು ತಂದಿದ್ದೇವೆ. ಅದು ನಮ್ಮ ತಪಸ್ಸಿಗೆ ದೊರೆತ ಅಪ್ರತಿಮ ಪ್ರತಿಫಲವಾಗಿರುವದು. ಅಂದರೆ ಈ ಫಲದ ಮಹಿಮೆಯು ಅಸದೃಶವಾದುದು. ವರ್ಣಿಸಲಸದಳವಾದುದು. ಅಂತೆಯೇ ಇಂತಹ ದುರ್ಲಭ ಫಲವನ್ನು ನಿನಗಾಗಿ ತಂದಿರುವೆವು. ನಮ್ಮಂಥವರು ಸೇವಿಸುವುದಕ್ಕಿಂತ ನಿನ್ನಂತಹ ರಾಜ್ಯಪರಿಪಾಲಕನು ಸೇವಿಸಿದರೆ ಜಗತ್ತಿಗೆ ಉಪಕಾರವಾದೀತು, ಎಂದು ಭಾವಿಸಿ ಇಲ್ಲಿಯ ವರೆಗೆ ಬಂದಿದ್ದೇವೆ."

ಎಂದು ಗೋರಕ್ಷನಾಥನು ನುಡಿಯಲು ಭರ್ತೃಹರಿಯು ಆಸನವನ್ನು ಬಿಟ್ಟೆದ್ದು ಅವನ ಬಳಿ ಹೋಗಿ ವಿನೀತನಾಗಿ ನಿಂತುಕೊಂಡು ಕರಗಳನ್ನು ಜೋಡಿಸಿ—

"ಪ್ರಭುಗಳು ಸರಿಯಾಗಿ ಯೋಚಿಸಬೇಕು. ತಾವು ತಂದಿರುವ ಫಲವು ನಿಜಕ್ಕೂ ಮಹಿಮೆಯುಳ್ಳದ್ದೇ ಇರಬೇಕು. ಆದರೆ.... ಆದರೆ ಅಂತಹ ಅಮೂಲ್ಯ ಫಲವನ್ನು ಸೇವಿಸಲು ನಾವು ಅರ್ಹರಿದ್ದೇವೆಯೇ, ಎಂಬ ಸಂಶಯ ಬರುತ್ತಿದೆ"ಎಂದನು.

ಆಗ ಗೋರಕ್ಷನಾಥನು ಹರಿವಾಣದೊಳಗಿಂದ ಫಲವನ್ನು ತೆಗೆದು ಕೈಯೊಳಗೆ ಹಿಡಿದುಕೊಂಡು—

"ನೀನು ಮನದೊಳಗೆ ಆ ಬಗೆಯ ವಿಚಾರವನ್ನು ತಂದುಕೊಳ್ಳಬೇಡ! ಈ ಫಲವನ್ನು ಸೇವಿಸಲು ನೀನು ನಿಜಕ್ಕೂ ಯೋಗ್ಯನಿರುವಿ. ಅಂತೆಯೇ ನಾವು ಇಲ್ಲಿಯ ವರೆಗೆ ಬಂದಿದ್ದೇವೆ. ಅದಕ್ಕಾಗಿ ನೀನು ಈ ಫಲವನ್ನು ಸ್ವೀಕರಿಸು."

ಎಂದು ನುಡಿದ ಗೋರಕ್ಷನಾಥನು ಆ ಫಲವನ್ನು ಭರ್ತೃಹರಿಯ ಕೈಗಿತ್ತು—

"ಭರ್ತೃಹರಿ! ಈ ಫಲದ ಸೇವನೆಯಿಂದಾಗುವ ಪ್ರಯೋಜನವನ್ನು ಹೇಳುತ್ತೇನೆ ಕೇಳು. ಈ ಫಲವನ್ನು ಯಾರು ಸೇವಿಸುವರೋ ಅವರಿಗೆ ಮುಪ್ಪು ಬರುವದೇ ಇಲ್ಲ. ಅವರು ಚಿರ ತಾರುಣ್ಯವನ್ನು ಪಡೆಯುವರು.

ಸಾವು ಕೂಡ ಅವರ ಸನಿಹಕ್ಕೆ ಸುಳಿಯುವದಿಲ್ಲ. ಇಂತಹ ಅಮೂಲ್ಯ ಫಲವನ್ನು ನೀನು ಸೇವಿಸಿ, ರಾಜ್ಯ ಪರಿಪಾಲನೆ ಮಾಡುತ್ತ ಅಚಂದ್ರಾರ್ಕ ಬಾಳು" ಎಂದನು.

"ಪ್ರಭುಗಳ ಕೃಪಾಶೀರ್ವಾದದಿಂದ ನಮ್ಮ ಜನ್ಮವು ಪಾವನವಾಯಿತು." ಎಂದು ಭರ್ತೃಹರಿಯು ಫಲವನ್ನು ಸ್ವೀಕರಿಸಿದನು.

ಅಲ್ಲಿಗೆ ಅಂದಿನ ಒಡ್ಡೋಲಗದ ಕಾರ್ಯಗಳು ಪೂರ್ತಿಗೊಂಡವು. ಹಾಗು ಭರ್ತೃಹರಿಯು ಆತುರದಿಂದ ಅರಮನೆಯನ್ನು ಪ್ರವೇಶಿಸಿದನು.

० ० ०

ಅರಮನೆಯೊಳಗೆ ಪ್ರವೇಶಿಸಿದ ಭರ್ತೃಹರಿಯನ್ನು ಪಿಂಗಳೆಯು ಅತಿ ಆದರದಿಂದಲೇ ಸ್ವಾಗತಿಸಿದಳು. ಆಸನಾರೂಢನಾದ ಭರ್ತೃಹರಿಯು—

"ರಾಣಿ! ಇಂದು ನಿಮಗೊಂದು ಅಮೂಲ್ಯ ಕಾಣಿಕೆಯನ್ನೀಯಲು ಇಲ್ಲಿಗೆ ಬಂದಿದ್ದೇವೆ" ಎಂದ.

"ಪ್ರಭುಗಳು ನಮಗೆ ಯಾವುದರ ಕೊರತೆಯೇ ಬಾರದಂತೆ ನೋಡಿಕೊಳ್ಳುತ್ತಿದ್ದಾರೆ. ಹೀಗಿರುವಾಗ ನಮಗೆ ಮತ್ತೆ ಕಾಣಿಕೆಯ ಅವಶ್ಯಕತೆಯೇನಿದೆ?" ಪಿಂಗಳೆಯೆಂದಳು.

"ಹಾಗಲ್ಲ ದೇವಿ! ಇಂದು ನಾವು ನಿಮಗೆ ಕೊಡುತ್ತಿರುವ ಕಾಣಿಕೆಯು ಅಪ್ರತಿಮವಾದುದೂ, ಅಸದೃಶವಾದುದೂ, ಆಗಿದೆ. ಅಲ್ಲದೆ ಅದು ಯೋಗಿವರ್ಯರೊಬ್ಬರಿಂದ ನಮಗೆ ದೊರೆತಿದೆ. ಅಂದಾಗ ಅದರ ಮಹಿಮೆಯು ಹೇಗಿರಬೇಕೆಂಬುದನ್ನು ನೀವೇ ವಿಚಾರ ಮಾಡಬೇಕು."

"ತಾವು ತಂದಿರುವ ಕಾಣಿಕೆಯು ಅಷ್ಟೊಂದು ಅಮೂಲ್ಯವಾಗಿದ್ದರೆ ಅಂಥದು ತಮಗೇ ಯೋಗ್ಯ!"

"ಇಂದು ನಮ್ಮ ಮಾತಿಗೆ ಎದುರಾಡಬೇಡಿ ದೇವಿ! ಈ ಅಮರ ಫಲವನ್ನು ದಯವಿಟ್ಟು ಸ್ವೀಕರಿಸಿರಿ. ಇದನ್ನು ಸೇವಿಸಿದವರು ಅಖಂಡ ತಾರುಣ್ಯವನ್ನು ಪಡೆಯನ್ನು ಪಡೆಯುತ್ತಾರೆ. ಅಲ್ಲದೆ ಮರಣವೂ ಅವರ ಸನಿಹಕ್ಕೆ ಸುಳಿಯಲಾರದೆಂದು ಯೋಗಿಗಳು ಹೇಳಿರುವರು. ಅಂತೆಯೇ ನಾವು ನಿಮಗಿದನ್ನು ಕೊಡುತ್ತಿದ್ದೇವೆ. ಏಕೆಂದರೆ ನೀವು ಸದಾ ಚಿರತಾರುಣ್ಯವತಿಯರಾಗಿರಬೇಕೆಂಬುದು ನಮ್ಮ ಅಭಿಪ್ರಾಯ."

"ಪ್ರಭುಗಳ ಅಭಿಪ್ರಾಯವು ನಮಗರ್ಥವಾಯಿತು. ತಮ್ಮ ಅಜ್ಞೆಯಂತೆ ಈ ಫಲವನ್ನು ಸೇವಿಸಲು ನಾವು ಸಿದ್ಧರಿದ್ದೇವೆ. ಆದರೆ ಇದಕ್ಕೆ ಒಂದೇ ಒಂದು ಆತಂಕವಿದೆ. ಅದನ್ನು ಹೇಳಬಹುದಲ್ಲವೆ.?"

"ಧಾರಾಳವಾಗಿ ಹೇಳಬಹುದು!"

"ಈ ಫಲವನ್ನು ನಾವು ಸೇವಿಸಿದರೆ ಚಿರತಾರುಣ್ಯ ಲಭಿಸುವದೆಂದು ತಾವು ಅಪ್ಪಣೆ ಕೊಡಿಸಿದಿರಿ."

"ಹೌದು. ಯೋಗಿಗಳೂ ಕೂಡ ಈ ಫಲದ ಬಗ್ಗೆ ಹಾಗೆಯೇ ಹೇಳಿದರು"

"ಅದು ಸರಿ. ಅಂಥ ಅಮೂಲ್ಯ ನಾವು ಸೇವಿಸಬೇಕೆಂದು ತಾವು ಇಚ್ಛೆ ಪಟ್ಟಿರಿ. ಇದರ ಮೇಲಿಂದ ತಾವು ನಮ್ಮನ್ನು ಎಷ್ಟು ಪ್ರೀತಿಸುತ್ತಿರುವಿರೆಂಬುದು ಗೊತ್ತಾಯಿತು. ಆದರೆ ನಾವು ತಮ್ಮನ್ನು ಎಷ್ಟು ಪ್ರೀತಿಸುತ್ತಿದ್ದೇವೆಂಬುದನ್ನು ಮಾತ್ರ ತಾವು ಅರಿತುಕೊಳ್ಳಲಿಲ್ಲ. ಅದಕ್ಕಾಗಿ ನಮಗೆ ವಿಷಾದವಾಗುತ್ತಿದೆ." ಪಿಂಗಳೆಯೆಂದಳು,

ಪಿಂಗಳೆಯ ಮಾತುಗಳನ್ನು ಕೇಳಿ ಭರ್ತೃಹರಿಗೆ ಅಚ್ಚರಿಯಾಯಿತು. ಏಕೆಂದರೆ ಇಂಥ ಅಮೂಲ್ಯ ಫಲವು ದೊರೆತಾಗ ಪಿಂಗಳೆಯು ಅತ್ಯಾನಂದದಿಂದ ಸೇವಿಸುವಳೆಂದೇ ಅವನು ಭಾವಿಸಿದ್ದನು. ಆದರೆ ಅವಳ ಬಾಯಿಂದ ಅನಿರೀಕ್ಷಿತವಾಗಿ ಹೊರಟ ಮಾತುಗಳನ್ನು ಕೇಳಿ ಒಂದು ಕ್ಷಣ ಏನೂ ತಿಳಿಯದೆ ಕುಳಿತು ಬಿಟ್ಟನು. ಮರುಗಳಿಗೆಯಲ್ಲಿಯೇ ಅವನು—

"ದೇವಿಯವರು ಹೇಳುತ್ತಿರುವದು ನಮಗೆ ಅರ್ಥವಾಗುತ್ತಿಲ್ಲ. ನಾವು ಎಂದೂ ನಿಮ್ಮ ಪ್ರೇಮದ ಬಗ್ಗೆ ಸಂದೇಹವನ್ನು ವ್ಯಕ್ತಗೊಳಿಸಿಲ್ಲವಲ್ಲ.!" ಎಂದನು.

"ಅದನ್ನು ನಮ್ಮ ಸೌಭಾಗ್ಯವೆಂದೇ ನಾನು ಭಾವಿಸುತ್ತೇವೆ" ಪಿಂಗಳೆಯೆಂದಳು" ಈ ವರೆಗೆ ಮಾತ್ರ ಹಾಗಿರಲಿಲ್ಲ. ಆದರೆ ಇದೀಗ ಮಾತ್ರ ಆ ಬಗೆಯ ಭಾವನೆಯನ್ನು ವ್ಯಕ್ತಗೊಳಿಸುತ್ತಿರುವಿರಿ!"

"ದೇವಿ! ನಿಮ್ಮ ಮಾತಿನ ಓಘವು ಎತ್ತ ಓಡುತ್ತಿದೆಯೆಂಬುದೇ ನಮಗೆ ತಿಳಿಯದಂತಾಗಿದೆ. ರಾಣಿಯವರು ದಯವಿಟ್ಟು ಈ ಬಗೆಯ ಮಾತುಗಳನ್ನಾಡದೆ ನೇರವಾಗಿ ಹೇಳಿ ಬಿಡಬೇಕು."

''ಹಾಗಿದ್ದರೆ ಕೇಳಿ! ತಾವು ನಮ್ಮನ್ನು ಅತಿಯಾಗಿ ಪ್ರೀತಿಸುತ್ತೀರಿ. ಈ ಮಾತಿಗೆ ತಾವು ನಮಗಾಗಿ ತಂದಿರುವ ಅಮರ ಫಲವೇ ಸಾಕ್ಷಿ. ಆದರೆ ತಮ್ಮನ್ನು ನಾವು ನಮ್ಮ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವಾಗ ಈ ಫಲ ವನ್ನು ಸೇವಿಸುವದು ಹೇಗೆ ಸಾಧ್ಯವಿದೆ?

''ಅಂಥ ತೊಂಗರೆಯೇನಿದೆ?"

"ಈ ಫಲವನ್ನು ಸೇವಿಸಿದರೆ ನಾವು ಚಿರ ಯೌವ್ವನೆಯರಾಗುವೆವೆಂದು ಅಪ್ಪಣೆಕೊಡಿಸಿದಿರಿ. ನಾವು ಚಿರ ತಾರುಣ್ಯವತಿಯರಾಗಿ ಉಳಿದುಕೊಂಡಾಗ ತಾವು ಮುಂದೆ ವೃದ್ಧರಾಗುವದು ಸ್ವಾಭಾವಿಕ. ಅಂಥ ಸಮಯದಲ್ಲಿ ನಾವು ಹೇಗೆ ಬದುಕಬಲ್ಲೆವು ಎಂಬುದನ್ನು ಪ್ರಭುಗಳು ವಿಚಾರ ಮಾಡಿದ್ದೀರಾ? ತಮ್ಮನ್ನು ಅರಗಳಿಗೆಯೂ ಅಗಲಿರಲು ಇಚ್ಛಿಸದ ನಾವು ಇಂಥ ಫಲವನ್ನು ಸ್ವೀಕರಿಸುವದು ಎಂದಿಗಾದರೂ ಸಾಧ್ಯವಿದೆಯೆ? ಯೋಗಿವರೇಣ್ಯರು ದಯ ಪಾಲಿಸಿದ ಈ ಫಲವು ಅತ್ಯಮೌಲ್ಯವಾಗಿರಬಹುದು. ಆದರೆ ನಮ್ಮ ಪಾಲಿಗೆ ಮಾತ್ರ ಕಾಳಕೂಟ ವಿಷವೆಂದು ಭಾವಿಸುತ್ತೇವೆ. ಅದಕ್ಕಾಗಿ ನಾವು ಇದನ್ನು ಸೇವಿಸಲಾರೆವು. ಅದರ ಬದಲು ತಾವೇ ಇದನ್ನು ಸೇವಿಸಿ ಚಿರತರುಣರಾಗಿ ಭಾರತ ವರ್ಷವನ್ನು ಪರಿಪಾಲಿಸಿರಿ. ಅಂದರೆ ಜಗತ್ತಿಗಾದರೂ ಕಲ್ಯಾಣ ವಾದೀತು."

''ದೇವಿ! ಇಂದು ನೀವು ನನ್ನ ಕಣ್ಣು ತೆರೆಯಿಸಿದಿರಿ. ಈ ಫಲವನ್ನು ನಿಮಗರ್ಪಿಸಲು ಬಂದಾಗ ನಮ್ಮೆದುರು ನಿಮ್ಮ ಮೂರ್ತಿಯೇ ನಿಂತುಕೊಂಡಿ ದ್ದಿತು. ಅದು ಯಾವಾಗಲೂ ಹಾಗೆಯೇ ಇರಬೇಕು, ಎಂಬ ಇಚ್ಛೆಯಿಂದ ಅಂದರೆ ನಿಮಗೆ ವೃದ್ಧಾಪ್ಯವೇ ಬರದಿರಲಿ, ನಮ್ಮ ಹೃದಯದ ಅಧಿದೇವತೆಯು ಸದಾ ತಾರುಣ್ಯವತಿಯಾಗಿಯೇ ಉಳಿಯಲಿ ಎಂಬ ಇಚ್ಛೆಯಿಂದ ಬಂದಿ ದ್ದೆವು. ಆದರೆ ನಿಮ್ಮ ಮಾತುಗಳು ನಮ್ಮನ್ನು ಎಚ್ಚರಿಸಿದವು.

"ತಮ್ಮ ಅಪಾರ ಪ್ರೇಮಕ್ಕಾಗಿ ನಾವು ಅಜನ್ಮ ಋಣಿಯಾಗಿದ್ದೇವೆ. ಈ ಪ್ರೇಮವು ನಮ್ಮ ಮೇಲೆ ಶಾಶ್ವತವಾಗಿರಲಿ, ಇಷ್ಟೇ ನಮ ಪ್ರಾರ್ಥನೆ. ಹಾಗು ಈ ಅಮೂಲ್ಯ ಫಲವನ್ನು ದಯವಿಟ್ಟು ತಾವೇ ಸ್ವೀಕರಿಸಬೇಕು. ತಾವು ಹಾಗೆ ಮಾಡಿದಿರೆಂದರೆ ನಮ್ಮಂಥವರು ಸಾವಿರಾರು ಜನರಿಗೆ ಆಶ್ರ

ಯಸಿಕ್ಕುವದು. ಹಾಗು ಸಾಹಿತ್ಯ ದೇವಿಯ ಉದ್ಯಾನದಲ್ಲಿ ಇನ್ನೂ ಅನೇಕ ಬಗೆಯ ವಲ್ಲರಿಗಳು ಹುಟ್ಟಿಕೊಳ್ಳಬಹುದು."

"ದೇವಿಯವರು ಹೇಳುತ್ತಿರುವದು ನಿಜ. ಆದರೆ ತಾವು ವೃದ್ಧಾಪ್ಯ ದಲ್ಲಿ ಕಾಲಿರಿಸಿದಾಗ ನಾವು ಹೇಗೆ ಜೀವಿಸಬೇಕು. ? ಎಂದು ವಿಚಾರ ಮಾಡಿದಂತಿಲ್ಲ."

"ಪ್ರಭುಗಳು ನಮ್ಮ ಮಾತನ್ನು ನಮಗೆ ತಿರುಗಿಸುತ್ತಿರುವಂತಿದೆ."

"ಹೌದು ಸತ್ಯವು ಯಾವಾಗಲೂ ಸತ್ಯವೇ ಅಲ್ಲವೆ ?

"ಅದು ನಿಜ. ಆದರೆ ನಮ್ಮ ವಿಷಯ ಬೇರೆ. ತಮ್ಮ ಮಾತು ಬೇರೆ ತಾವು ವೃಕ್ಷದಂತಿದ್ದರೆ ನಾವುಗಳೆಲ್ಲ ರೆಂಬೆಗಳಿದ್ದಂತೆ."

"ರೆಂಬೆಗಳು ಸರಿಯಾಗಿದ್ದರೆ ವೃಕ್ಷಕ್ಕೊಂದು ಶೋಭೆಬರುತ್ತದೆ. ಪೂರ್ಣತ್ವ ಬರುತ್ತದೆ. ಎಂಬುದನ್ನು ದೇವಿಯವರು ಮರೆತಂತೆ ಕಾಣುತ್ತದೆ."

"ಮಾತಿನಲ್ಲಿ ತಮ್ಮನ್ನು ಗೆಲ್ಲುವದು ನಮ್ಮಿಂದ ಎಂದಿಗಾದರೂ ಸಾಧ್ಯವಿದೆಯೆ ? ಅದೇನೇ ಇರಲಿ. ಆದರೆ ನಾವು ಮಾತ್ರ ಈ ಫಲವನ್ನು ಸೇವಿಸಲಾರೆವು."

"ಅದಂತೂ ತಿಳಿದಂತಾಯಿತು. ಆದರೆ ಯೋಗಿವರೇಣ್ಯರು ರಾಜಧಾನಿಯ ವರೆಗೆ ಬಂದು ದಯಪಾಲಿಸಿದಂಥ ಈ ಅಮೂಲ್ಯ ಫಲವು ಅನ್ಯಾಯವಾಗಿ ಹಾಳಾಗಬೇಕೆ, ಎಂಬುದು ನಮ್ಮ ಮನವನ್ನು ಪೀಡಿಸತೊಡಗಿದೆಯಲ್ಲ. !"

ಎಂದು ನುಡಿದು ಭರ್ತೃಹರಿಯು ಕೈಯಲ್ಲಿದ್ದ ಫಲವನ್ನು ಅಲ್ಲಿಯೇ ಇದ್ದ ಬಂಗಾರದ ತಟ್ಟೆಯೊಳಗಿರಿಸಿ ಸುಮ್ಮನೆ ಕುಳಿತುಕೊಂಡನು. ಪಿಂಗಳೆಯೂ ಏನನ್ನೋ ಯೋಚಿಸುತ್ತ ಕುಳಿತುಕೊಂಡಳು. ನಾಲ್ಕಾರು ಕ್ಷಣಗಳ ವರೆಗೆ ಯಾರೂ ಮಾತನಾಡಲಿಲ್ಲ. ಕೊನೆಗೆ ಪಿಂಗಳೆಯೇ ಒಂದು ನಿರ್ಧಾರಕ್ಕೆ ಬಂದು......

"ಒಂದು ವಿಷಯ ಅರಿಕೆಮಾಡಿಕೊಳ್ಳ ಬಹುದೆ ?" ಎಂದಳು

"ತಮ್ಮ ಮನದೊಳಗಿದ್ದುದನ್ನು ದೇವಿಯವರು ಧಾರಾಳವಾಗಿ ಹೇಳ ಬಹುದು. ಯಾವ ಬಗೆಯ ಸಂಕೋಚವನ್ನು ತೆಗೆದುಕೊಳ್ಳ ಕೂಡದು." ಭರ್ತೃಹರಿ ನುಡಿದ.

"ನಾವು ಈ ಫಲವನ್ನು ರಾಹುಲನಿಗೆ ಕೊಟ್ಟರೆ ಹೇಗೆ ?" ಪಿಂಗಳೆ ಅಂಜುತ್ತಂಜುತ್ತ ಪ್ರಶ್ನಿಸಿದಳು.

"ಈ ಅಮೂಲ್ಯ ಫಲವನ್ನು ರಾಹುಲನಿಗೆ ಕೊಡುವದೇ ? ಕಾರಣ?" ಭರ್ತೃಹರಿ ಆಶ್ಚರಿಯಿಂದ ಮರು ಪ್ರಶ್ನೆ ಹಾಕಿದ.

"ಕಾರಣ ವಿಷ್ಟೇ ! ನಮಗಾಗಿ ಅವನು ಬಹು ದೊಡ್ಡ ತ್ಯಾಗ ಮಾಡಿದ್ದಾನೆ. ನಾವೀರ್ವರೂ ಜೀವಿಸಿರುವ ವರೆಗೆ ರಾಹುಲನು ಗೃಹಸ್ಥ ಧರ್ಮವನ್ನು ಸ್ವೀಕರಿಸಲಾರ. ಅದಕ್ಕಾಗಿ ಅವನಿಗೆ ಕೊಟ್ಟರೆ........"

"ದೇವಿಯವರಿಗೆ ತಾವು ಏನು ಮಾತನಾಡುತ್ತಿರುವರೆಂಬುದು ತಿಳಿದಿದೆಯೆ ?"

"ಚೆನ್ನಾಗಿ ತಿಳಿದಿದೆ ಪ್ರಭು. ರಾಹುಲನು ಹೀಗೆಯೇ ಇದ್ದರೆ ಬಹು ಕಾಲ ಬದುಕಲಾರ. ನಮ್ಮ ಶ್ರೇಯಸ್ಸೇ ತನ್ನ ಜೀವನದುಸಿರೆಂದು ಭಾವಿಸಿರುವ ಅವನು ಎಷ್ಟು ದಿನ ಬದುಕುವದು ಸಾಧ್ಯವಿದೆ.?"

"ಅದು ಸರಿ. ಆದರೆ ಅಷ್ಟಕ್ಕೇ ಈ ಅಮೂಲ್ಯ ಫಲವನ್ನು ಅವನಿಗೀಯುವದೇ ?"

"ಪ್ರಭುಗಳು ಶಾಂತ ರೀತಿಯಿಂದ ವಿಚಾರ ಮಾಡಬೇಕು. ನಮ್ಮ ನಂತರವಾದರೂ ರಾಹುಲನು ಚೆನ್ನಾಗಿರಲಿ ಎಂಬುದು ನಮ್ಮ ಅಪೇಕ್ಷೆ. ಹೀಗೆ ಮಾಡುವದರಿಂದ, ನಮ್ಮಿಂದ ದುಃಖಕ್ಕೆ ಈಡಾದವನಿಗೆ ಸಹಾಯ ಮಾಡಿದಂತಾಗುತ್ತದೆ. ಅಷ್ಟೆ !"

"ಧನ್ಯ ದೇವಿ. ನಿಮ್ಮ ಗುಣಕ್ಕೆ ನಾವು ಮಾರುಹೋಗಿದ್ದುದು ಇಂದಿಗೆ ಸಾರ್ಥಕವಾಯಿತು. ನಿಮ್ಮ ಮನಸ್ಸಿಗೆ ಬಂದ ಹಾಗೆ ಈ ಫಲವನ್ನು ಉಪಯೋಗಿಸಬಹುದು. ಯಾವ ಕಾರಣಕ್ಕಾಗಿ ನಿಮಗಿದು ಬೇಡವೋ ಅದೇ ಕಾರಣಕ್ಕಾಗಿ ನಮಗೂ ಬೇಡ. ಅದಕ್ಕಾಗಿ ರಾಹುಲನಿಗೆ ಕೊಟ್ಟು ಬಿಡಿರಿ."

"ಅಂದರೆ.? ರಾಹುಲನಿಗೆ ನಾವು ಒಬ್ಬರೇ ಕೊಡಬೇಕೆ ?"

"ಹೌದು. ಆ ಸಮಯದಲ್ಲಿ ನಾವು ಏತಕ್ಕೆ ಇರಬೇಕು?"

"ಪ್ರಭುಗಳು ತಪ್ಪುತ್ತಿದ್ದೀರಿ. ನಾವೀರ್ವರೂ ಆಶೀರ್ವದಿಸಿ ರಾಹುಲನಿಗೆ ಇತ್ತುದಾದರೆ ಶ್ರೇಯಸ್ಕರವಾದೀತು. ಅಲ್ಲವೆ ?

"ಹೌದು ದೇವಿ ! ನಿಮ್ಮ ಮಾತು ನಿಜ. ಹಾಗೆಯೇ ಮಾಡೋಣ"

ಎಂದು ನುಡಿದು ಭರ್ತೃಹರಿಯು ರಾಹುಲನನ್ನು ಕರೆತರಲು ಚಾರನನ್ನು ಅಟ್ಟಿದನು. ಆಗ ಅವನ ಮನದಲ್ಲಿ "ತ್ಯಾಗದಲ್ಲಿ ಪಿಂಗಳೆಯು ತನಗಿಂತ ಯಾವುದರಲ್ಲಿಯೂ ಕಡಿಮೆಯಿಲ್ಲ" ಎಂಬುದು ನಿಶ್ಚಿತವಾಯಿತು.

ಮುಂದೆ ಸ್ವಲ್ಪ ಸಮಯದಲ್ಲಿಯೇ ರಾಹುಲನು ಅಲ್ಲಿಗೆ ಬಂದನು. ತನ್ನನ್ನು ಅರಮನೆಗೆ ಏತಕ್ಕೆ ಕರೆಯಿಸಿರಬಹುದೆಂದು ಅವನು ದಿಗಿಲುಗೊಂಡೇ ಬಂದಿದ್ದನು. ಆದರೆ ಅರಸು-ಅರಸಿಯರೀರ್ವರೂ ಸಂತೋಷದಿಂದ ಸ್ವಾಗಸಿದ್ದನ್ನು ಕಂಡು ಅವನಿಗೆ ಕೊಂಚ ನೆಮ್ಮದಿಯಾಯಿತು. ಆಗ ಪಿಂಗಳೆಯು ಅವನಿಗೆ ಕರೆಕಳುಹಿದ ಕಾರಣವನ್ನು ವಿವರಿಸಿ, ಆ ಫಲವನ್ನು ಅವನಿಗಿತ್ತಳು. ಅನಂತರ ಅರಸ-ಅರಸಿಯರೀರ್ವರೂ ಅವನಿಗೆ ಆಶೀರ್ವಾದ ಮಾಡಿ ಕಳುಹಿಸಿದರು.

* * *

ಅರಮನೆಯಿಂದ ಮರಳುವಾಗ ರಾಹುಲನಿಗೆ ದಿಕ್ಕೇ ತಿಳಿಯದಂತಾಗಿತ್ತು. ಹಾಗು ರಾಜ-ರಾಣಿಯರ ತ್ಯಾಗದಿಂದ ಅವನು ಅರೆಹುಚ್ಚನಾಗಿಬಿಟ್ಟದ್ದನು. ಅವರೆದುರು ಹೆಚ್ಚು ವಾದಿಸಲಿಚ್ಛಿಸದೆ ಹಾಗೆಯೇ ತೆಗೆದುಕೊಂಡು ಬಂದಿದ್ದ ಅಮರ ಫಲವನ್ನು ತಾನೂ ಸೇವಿಸಕೂಡದು ಎಂದು ನಿರ್ಧರಿಸಿದನು. ಏಕೆಂದರೆ ಸ್ವತಃ ಸಮ್ರಾಟರೇ ಇಂಥ ತ್ಯಾಗಕ್ಕೆ ಸಿದ್ಧರಾಗಿರುವಾಗ ನಾನೂ ಏತಕ್ಕೆ ತ್ಯಾಗಿಯಾಗಬಾರದು? ಎಂಬುದು ಅವನ ಮನೀಷೆಯಾಗಿತ್ತು.

ಅನಂತರ, ಈ ಫಲವನ್ನು ಯಾರಿಗೆ ಕೊಡಬೇಕು ಎಂಬ ಹೊಸ ಚಿಂತೆಯು ಅವನ ಮನವನ್ನಾವರಿಸಿತು. ಕೊನೆಗೆ ಅವನು ಅದನ್ನು—ಆ ಫಲವನ್ನು—ರಾಜನರ್ತಕಿಗೆ ಕೊಡಬೇಕೆಂದು ನಿರ್ಧರಿಸಿದನು. ಏಕೆಂದರೆ ನರ್ತಕಿಯ ಜೀವನವು ಅವಳಲ್ಲಿ ರೂಪ, ಲಾವಣ್ಯ ಹಾಗು ತಾರುಣ್ಯಗಳಿರುವವರೆಗೆ ಮಾತ್ರ. ಅವುಗಳು ಇಲ್ಲವಾದಾಗ ಅವಳನ್ನು ಯಾರೂ ಮಾತನಾಡಿಸುವದಿಲ್ಲ. ಅದಕ್ಕಾಗಿ ಇದನ್ನು ಅವಳಿಗೇ ಕೊಡಬೇಕು ಎಂದು ನಿರ್ಧರಿಸಿ ರಾಜನರ್ತಕಿಯ ಮನೆಗೆ ಹೋಗಿ,ಅವಳಿಗೆ ಆ ಫಲವನ್ನಿತ್ತು ಅದರ ಮಹತ್ವವನ್ನೂ ತಿಳಿಸಿ ಬಂದನು.

ರಾಜನರ್ತಕಿಗೂ ದಿಗಿಲಾಯಿತು. ಇಂಥ ಫಲವನ್ನು ತಾನು ಸೇವಿಸುವದಕ್ಕಿಂತ ಅರಸನು ಸೇವಿಸಿದರೆ ಒಳ್ಳೆಯದು. ಏಕೆಂದರೆ ಇಂಥ ಅರಸನು ಇದ್ದರೆ ನಮ್ಮಂಥ ಸಾವಿರಾರು ನರ್ತಕಿಯರು ಉದರ ನಿರ್ವಹಣೆ ಮಾಡಿಕೊಳ್ಳಬಹುದು ಎಂದು ನಿರ್ಧರಿಸಿ ಒಡ್ಡೋಲಗಕ್ಕೆ ಹೋಗಿ ಆ ಫಲವನ್ನು ಭರ್ತೃಹರಿಗೆ ಕೊಟ್ಟಳು. ಪಿಂಗಳೆಯ ತ್ಯಾಗದಿಂದ ಮೊದಲೇ ಚಂಚಲವಾಗಿದ್ದ ಭರ್ತೃಹರಿಯ ಮನಸ್ಸು ರಾಹುಲ ಹಾಗು ರಾಜನರ್ತಕಿಯರ ತ್ಯಾಗದಿಂದ ಸಂಪೂರ್ಣವಾಗಿ ವೈರಾಗ್ಯದೆಡೆಗೆ ತಿರುಗಿತು. ಹಾಗು ಗೋರಕ್ಷನಾಥನಿಂದ ದೀಕ್ಷೆಯನ್ನು ಪಡೆದು ಯೋಗಿಯಾಗಿ ವೈರಾಗ್ಯ ಶತಕ ರಚಿಸಿದನು.

(ಭರ್ತೃಹರಿಯ ಚರಿತ್ರೆಯಲ್ಲಿ ಬಂದ ನೂತನ ಕಥಾಸಂವಿಧಾನವನ್ನು ಯಾರೂ ಯಾವುದೆ ಕಾರಣಕ್ಕಾಗಿ ಲೇಖಕರ ಅನುಮತಿ ಇಲ್ಲದೆ ಉಪಯೋಗಿಸ ಕೂಡದು. ಭಾಷಾಂತರ ಹಾಗು ರೂಪಾಂತರವನ್ನು ಕೂಡ ಅನುಮತಿಯಿಲ್ಲದೆ ಮಾಡಬಾರದು.)